# ಹಂಪಿ ಟೈಮ್ಸ್
HAMPI TIMES
ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
epaper.hampitimes.com | e-mail: hampitimes@gmail.com | M:94486 33038 Reg.No.PMG/KA/NK/BLY/01/2024-2026

ಸಂಪುಟ:02 Volume:02 • ಸಂಚಿಕೆ: 310 Issue: 310 • ಪಿ.ಆರ್.ಜಿ.ಐ.ನಂ.:KARKAN/2023/88055 PRGI No:KARKAN/2023/88055 • ವಿಜಯನಗರ VIJAYANAGARA • 20.06.2025 • ಶುಕ್ರವಾರ Friday • ಪುಟ:04 Page:04 • ಬೆಲೆ:2 Rs:2



Grow with Us, Advertise in Hampi Times
Print & Digital Media
"Looking to bring your sales and services to readers Fingertips? HAMPI TIMES is the ideal platform"



Call:9448633038/email:hampitimes@gmail.com


## ಆನಂದ ಬಾಣ

ಇಷ್ಟೇ ಪ್ರಪಂಚ




COLD PRESSED OILS
HEALTH Benefits



- Heart Healthy
- Diabetes Friendly
- Healthy Skin & More
- Hair Fall Control

Nandi Enterprises
C/o HAMPI TIMES
Valmiki Circle, HOSAPETE
9482599089


ಪಾಠಕ್ಕಿಂತ ದಾಖಲೆ ಬರಹಕ್ಕೆ ಹೆಚ್ಚು ಸಮಯ | ಮಕ್ಕಳಿಗೆ ಕಲಿಸಲು ಅಡ್ಡಿಯಾದ ಶ್ರೇಣೀಕೃತ ಶಿಕ್ಷಕರ ಇಲಾಖೆ ನಿಯಮ

# ಹಾದಿ ತಪ್ಪಿದ ಪ್ರಾಥಮಿಕ ಶಿಕ್ಷಣ : ಯಾರು ಹೊಣೆ? ಹೈಸ್ಕೂಲಿಗೆ ಬಂದ್ರೂ ಓದಲು ಬರೆಯಲು ಬರುತ್ತಿಲ್ಲ!

ಮಕ್ಕಳ ಕಲಿಕಾಮಟ್ಟ ನೋಡಿ ಬೆಚ್ಚಿಬಿದ್ದ ಪಾಲಕರು | ಪ್ರಾ. ಶಿಕ್ಷಕರು ಮಕ್ಕಳೊಂದಿಗೆ ಬೆರೆಯಲು ಸಮಯದ ಕೊರತೆ

ನಾಳಿನ ಭಾರತದ ಭವಿಷ್ಯ ಮಸುಕಾಗದಂತೆ ಎಚ್ಚರವಹಿಸಬೇಕಿದೆ | ಎಲ್ಲರಲ್ಲೂ ಬೇಕಿದೆ ಆತ್ಮಾವಲೋಕನ

■ **ಹಂಪಿ ಟೈಮ್ಸ್ ಹೊಸಪೇಟೆ**

ಇತ್ತೀಚೆಗೆ ಹೈಸ್ಕೂಲ್ ಪ್ರವೇಶ ಪಡೆದ ಅನೇಕ ಮಕ್ಕಳಿಗೆ ತಮ್ಮ ಹೆಸರು ಬರೆಯಲು, ಓದಲು ಬಾರದಿರುವುದು ಪೋಷಕರಷ್ಟೇ ಅಲ್ಲ, ಸಮಾಜವನ್ನೇ ದಿಗ್ಭ್ರಮೆಗೊಳಿಸಿದೆ. ಸಮರ್ಥ ಶಿಕ್ಷಕರಿದ್ದರೂ, ಮಕ್ಕಳ ಭವಿಷ್ಯಕ್ಕೆ ಭದ್ರ ಬುನಾದಿ ಹಾಕಬೇಕಿದ್ದ ಪ್ರಾಥಮಿಕ ಶಿಕ್ಷಣದ ದಿಕ್ಕು ಎತ್ತ ಸಾಗುತ್ತಿದೆ ಎಂಬ ಪ್ರಶ್ನೆ ಸಾರ್ವಜನಿಕರನ್ನು ತೀವ್ರವಾಗಿ ಕಾಡುತ್ತಿದೆ. ಇದು ಕೇವಲ ಮಕ್ಕಳ ಶೈಕ್ಷಣಿಕ ಭವಿಷ್ಯದ ಪ್ರಶ್ನೆಯಲ್ಲ, ನಾಳಿನ ಸಮಾಜದ ಸ್ಥಿತಿಯನ್ನೂ ಪ್ರತಿಬಿಂಬಿಸುತ್ತದೆ.

ಪ್ರಾಥಮಿಕ ಹಂತದಲ್ಲಿ ಅಕ್ಷರ ಜ್ಞಾನದ ಕೊರತೆ ಇರುವುದು ಕೇವಲ ಪೋಷಕರ ನಿರ್ಲಕ್ಷ್ಯದಿಂದಲ್ಲ. ಶಾಲೆಗಳಲ್ಲಿ ಕಲಿಕೆಯ ಗುಣಮಟ್ಟ ಕುಸಿಯುತ್ತಿರುವುದರ ಹಿಂದಿನ ಪ್ರಮುಖ ಕಾರಣಗಳೇನಿರಬಹುದು.? ಸರ್ಕಾರಿ ಶಾಲೆಗಳಲ್ಲಿ ಉತ್ತಮ ಶಿಕ್ಷಕರು, ಆಧುನಿಕ ಸೌಲಭ್ಯಗಳು ಇದ್ದರೂ, ಮಕ್ಕಳಿಗೆ ಬುನಾದಿ ಓದು-ಬರಹದ ಕೌಶಲ್ಯಗಳನ್ನು ಕಲಿಸಲು ಸಾಧ್ಯವಾಗುತ್ತಿಲ್ಲ ಎಂದರೆ ಎಲ್ಲಿ ಲೋಪವಾಗುತ್ತಿದೆ ಎಂಬುದನ್ನು ಗಂಭೀರವಾಗಿ ಪರಾಮರ್ಶಿಸಬೇಕಿದೆ. ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವುದು, ಶಿಕ್ಷಕರು ತಮ್ಮ ಜವಾಬ್ದಾರಿಯನ್ನು ನಿರ್ವಹಿಸುವುದು ಮತ್ತು ಇಲಾಖೆ ಮೇಲಿಂದ ಮೇಲೆ ಹೊರಡಿಸುತ್ತಿರುವ ಆದೇಶಗಳ ಪಾಲನೆಯ ದಾಖಲೆ ಬರೆಯುವುದು ಮತ್ತು ಮೇಲಾಧಿಕಾರಿಗಳು ವಹಿಸಿಕೊಂಡ ಜವಾಬ್ದಾರಿಯನ್ನು ಅಚ್ಚುಕಟ್ಟಾಗಿ ನಿರ್ವಹಿಸದಿರುವುದರ ನಡುವೆ ಎಲ್ಲೋ ಒಂದು ಕಡೆ ಕೊಂಡಿ ಕಳಚಿದಂತಿದೆ.

### ಪ್ರಾಥಮಿಕ ಶಿಕ್ಷಣದ ಭವಿಷ್ಯದ ಪ್ರಶ್ನೆ


ಪ್ರಾಥಮಿಕ ಶಿಕ್ಷಣವು ಪ್ರತಿ ಮಗುವಿನ ಭವಿಷ್ಯಕ್ಕೆ ಆಧಾರ ಸ್ತಂಭವಾಗಿದೆ. ಇಲ್ಲಿ ಪಡೆದ ಜ್ಞಾನ ಮತ್ತು ಕೌಶಲ್ಯಗಳು ಮುಂದಿನ ಶೈಕ್ಷಣಿಕ ಜೀವನಕ್ಕೆ ಅಡಿಪಾಯ ಹಾಕುತ್ತವೆ. ಆದರೆ, ಬುನಾದಿ ಸಾಮರ್ಥ್ಯ ಗಳಿಸದೇ ಹೈಸ್ಕೂಲ್‌ಗೆ ಹೋಗುವ ಮಕ್ಕಳ ಪರಿಸ್ಥಿತಿ ಏನು? ಅವರು ಉನ್ನತ ಶಿಕ್ಷಣ ಪಡೆಯಲು ಸಾಧ್ಯವೇ? ಸಮಾಜದಲ್ಲಿ ಸಶಕ್ತ ಪ್ರಜೆಗಳಾಗಿ ಹೊರಹೊಮ್ಮಲು ಅವರಿಗೆ ಸಾಧ್ಯವಾಗುತ್ತದೆಯೇ? ಈ ಪ್ರಶ್ನೆಗಳು ಸಾರ್ವಜನಿಕರಲ್ಲಿ ಆತಂಕ ಮೂಡಿಸಿವೆ.

### ಸರ್ಕಾರದ ಹೊಣೆಗಾರಿಕೆ

ಈ ಗಂಭೀರ ಸಮಸ್ಯೆಯನ್ನು ಸರ್ಕಾರ ತುರ್ತಾಗಿ ಪರಿಗಣಿಸಬೇಕು. ಕೇವಲ ಯೋಜನೆಗಳನ್ನು ಘೋಷಿಸಿದರೆ ಸಾಲದು, ಅವುಗಳ ಸಮರ್ಪಕ ಅನುಷ್ಠಾನದ ಕಡೆಗೆ ಗಮನ ಹರಿಸಬೇಕು. ಶಿಕ್ಷಕರ ನೇಮಕಾತಿ, ಪಠ್ಯೇತರ ಚಟುವಟಿಕೆಗಳಿಗೆ ಸಿಬ್ಬಂದಿ, ತರಬೇತಿ, ಪಠ್ಯಕ್ರಮದ ವಿನ್ಯಾಸ, ಮತ್ತು ಶಾಲಾ ಆಡಳಿತದಲ್ಲಿ ಇನ್ನಷ್ಟು ಸುಧಾರಣೆಗಳನ್ನು ತರಬೇಕು. ಮಕ್ಕಳ ಕಲಿಕಾ ಮಟ್ಟವನ್ನು ನಿಯಮಿತವಾಗಿ ಪರಿಶೀಲಿಸುವ ವ್ಯವಸ್ಥೆಯನ್ನು ಬಲಪಡಿಸಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರಿಗೆ ವಿಶೇಷ ತರಬೇತಿ ನೀಡುವ ಯೋಜನೆಗಳನ್ನು ರೂಪಿಸಬೇಕು.

### ಅಧಿಕಾರಿಗಳ ಮನೋಭಾವ

**ವಿದ್ಯಾರ್ಥಿಗಳ ಶೈಕ್ಷಣಿಕ ಅಭಿವೃದ್ಧಿಗಿಂತ ತಮಗೆ ಬೇಕಿರುವ ದಾಖಲೆಗಳ ಕುರಿತಾಗಿ ಅತೀವ ಆಸಕ್ತಿ ತೋರುತ್ತಿದ್ದಾರೆ. ತಾವು ತಮ್ಮ ಮೇಲಾಧಿಕಾರಿಗಳಿಗೆ ಕಳುಹಿಸಬೇಕಾದ ವರದಿಗಳ ಬಗ್ಗೆ ಹೆಚ್ಚು ಆಸಕ್ತಿವಹಿಸಿ, ಶಿಕ್ಷಕರಿಂದ ಅಂಕಿ ಸಂಖ್ಯೆಯ ವರದಿಗಳಿಗೆ ಒತ್ತಡ ಹೇರಲಾಗುತ್ತಿದೆ. ಇದರಿಂದ ಶಿಕ್ಷಕರು ಪಠ್ಯ ಬೋಧನೆಗಿಂತ ಮಾಹಿತಿ ಬರೆದ ದಾಖಲೆಗಳನ್ನು ನೀಡುವುದರಲ್ಲೆ ಇಡೀ ಸಮಯ ಕಳೆದುಹೋಗುತ್ತಿದೆ ಎನ್ನುವುದು ಶಿಕ್ಷಕರ ಅಭಿಪ್ರಾಯ.**



### ಪ್ರಾಥಮಿಕ ಶಿಕ್ಷಕರ ಪಠ್ಯ ಭೋಧನೆ ಜತೆ ನಿರ್ವಹಿಸಲೇಬೇಕಾದ ಕಡ್ಡಾಯ ದಾಖಲೆಗಳ ಪಟ್ಟಿ, ಪಾಠಕ್ಕೆ ಸಮಯವೆಷ್ಟು?

- ಶಿಕ್ಷಕರ ದಿನಚರಿ
- ಪಾಠ ಟಿಪ್ಪಣಿ
- ವಾರ್ಷಿಕ ಪಟ್ಟಿ ವಿಭಜನೆ
- ಬುನಾದಿ ಸಾಕ್ಷರತೆ FLN ಸಾಮರ್ಥ್ಯಗಳ ಪಟ್ಟಿ.
- FLN ಸಾಮರ್ಥ್ಯಗಳ ಆಧಾರದ ಮೇಲೆ ವಿಷಯವಾರು ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆ ತಯಾರಿಕೆ. ಹಾಗೂ ಮಕ್ಕಳಿಗೆ ಪರೀಕ್ಷೆ ತೆಗೆದುಕೊಳ್ಳುವುದು.
- ದಾಖಲೆಗಳ ನಿರ್ವಹಣೆ.
- FLN ನಲ್ಲಿ ಹಿಂದುಳಿದ ಮಕ್ಕಳಿಗಾಗಿ ಕ್ರಿಯಾಯೋಜನೆ.
- ಸೇತುಬಂಧ ಪರೀಕ್ಷೆ, ಪೂರ್ವ ಪರೀಕ್ಷೆ ಹಾಗೂ ಸಾಫಲ್ಯ ಪರೀಕ್ಷೆ.
- ಪ್ರಶ್ನೆ ಹಾಗೂ ಉತರ ಪತ್ರಿಕೆಗಳ ನಿರ್ವಹಣೆ.
- ಗೈರು ಹಾಜರಿ ಮಕ್ಕಳ ಮನೆ ಭೇಟಿ ಹಾಗೂ ದಾಖಲೆ ನಿರ್ವಹಣ
- ಕ್ಷೀರ ಭಾಗ್ಯ, ಬಿಸಿ ಊಟ ದಾಖಲೆಗಳ ನಿರ್ವಹಣೆ.
- ಸ್ಯಾಟ ನಲ್ಲಿ ಮಕ್ಕಳ ಹಾಜರಿ ಬಿಸಿಊಟ ದಾಖಲೆ.
- ಪ್ರತಿ ಪಾಠಕ್ಕೂ ಘಟಕ ಪರೀಕ್ಷೆಗಳು
- 4 FA ಹಾಗೂ 2 SA ಪರೀಕ್ಷೆಗಳ ಪ್ರಶ್ನೆ ಪತ್ರಿಕೆ ಹಾಗೂ ಉತ್ತರ ಪತ್ರಿಕೆಗಳು.
- ಪ್ರತಿದಿನ ಒಂದೊಂದು ತರಗತಿಯ ಮಕ್ಕಳಿಂದ ಕ್ಯಾಲೆಂಡರ್ ಪ್ರಕಾರ ಪ್ರಾರ್ಥನೆ ನೆರವೇರಿಸುವುದು
- ಬ್ಯಾಗರಹಿತ ಸಂಭ್ರಮ ಶನಿವಾರದ ತಯಾರಿ.
- ಗ್ರಂಥಾಲಯ ನಿರ್ವಹಣೆ
- ಶಾಲಾ ಸಂಸತ್ತು ನಿರ್ವಹಣೆ
- ಮಕ್ಕಳ ವಿಜ್ಞಾನ ಸಂಘ

### ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ತ್ರಿಸೂತ್ರಗಳು

1. ಶಾಲೆಗೆ ಹೋಗದ ಶಿಕ್ಷಕರನ್ನು (Drop out teachers) ಶಾಲೆಗೆ ಕಳುಹಿಸಿ
2. ಶಾಲೆಗೆ ಹೋದ ಶಿಕ್ಷಕರನ್ನು ತರಗತಿಗೆ ಕಳಿಸಿ
3. ತರಗತಿಗೆ ಹೋದ ಶಿಕ್ಷಕರಿಂದ ಪಾಠ ಮಾಡಿಸಿ..

- ಮಹಿಮ

### ಶಿಕ್ಷಕರ ಆತ್ಮಾವಲೋಕನ ಅಗತ್ಯ

ಸರ್ಕಾರದ ಸೌಲಭ್ಯಗಳನ್ನು ಪಡೆಯುತ್ತಿರುವ ಶಿಕ್ಷಕರು ಈ ವಿಷಯದಲ್ಲಿ ಆತ್ಮಾವಲೋಕನ ಮಾಡಿಕೊಳ್ಳುವ ಅಗತ್ಯವಿದೆ. ಶಿಕ್ಷಕ ವೃತ್ತಿ ಕೇವಲ ಸಂಬಳ ಪಡೆಯುವ ಉದ್ಯೋಗವಲ್ಲ, ಅದು ಸಮಾಜ ನಿರ್ಮಾಣದ ಪವಿತ್ರ ಕಾರ್ಯ. ವರ್ಷದ ಆರಂಭದಿಂದಲೇ ಮಕ್ಕಳಿಗೆ ಬುನಾದಿ ಶಿಕ್ಷಣ ನೀಡುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕು. ಪ್ರತಿ ಮಗುವಿನ ಕಲಿಕೆಯ ಅಗತ್ಯಗಳನ್ನು ಗುರುತಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಬೇಕು. ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಗಮನ ನೀಡುವ ಮೂಲಕ ಅವರನ್ನು ಮುಖ್ಯವಾಹಿನಿಗೆ ತರಬೇಕು. "ಗುರುವಿನ ಹಿರಿಮೆ" ಎನ್ನುವುದು ಬೋಧನೆ ಮತ್ತು ಕಲಿಕೆಯಲ್ಲಿ ತಮ್ಮನ್ನು ತಾವು ಸಂಪೂರ್ಣವಾಗಿ ತೊಡಗಿಸಿಕೊಂಡಾಗ ಮಾತ್ರ ಹೆಚ್ಚುತ್ತದೆ ಎಂಬುದನ್ನು ನೆನಪಿಡಬೇಕು.

### ಪೋಷಕರ ಪಾತ್ರ

ಪೋಷಕರೂ ಕೂಡ ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಹೆಚ್ಚು ಜವಾಬ್ದಾರಿಯುತವಾಗಿ ವರ್ತಿಸಬೇಕು. ಮಕ್ಕಳ ಕಲಿಕೆಯ ಬಗ್ಗೆ ಶಾಲೆಯೊಂದಿಗೆ ನಿರಂತರ ಸಂಪರ್ಕದಲ್ಲಿರಬೇಕು. ಮನೆಯಲ್ಲಿಯೂ ಮಕ್ಕಳಿಗೆ ಓದಲು, ಬರೆಯಲು ಪ್ರೋತ್ಸಾಹ ನೀಡಬೇಕು. ಶಿಕ್ಷಕರೊಂದಿಗೆ ಸಹಕರಿಸುವುದರಿಂದ ಮಕ್ಕಳ ಕಲಿಕೆಯ ಪ್ರಗತಿ ಇನ್ನಷ್ಟು ಉತ್ತಮವಾಗುತ್ತದೆ.

ಪ್ರಾಥಮಿಕ ಶಿಕ್ಷಣದ ಗುಣಮಟ್ಟವನ್ನು ಸುಧಾರಿಸುವುದು ಕೇವಲ ಶಿಕ್ಷಣ ಇಲಾಖೆಯ ಜವಾಬ್ದಾರಿಯಲ್ಲ, ಅದು ಸಮಗ್ರ ಸಮಾಜದ ಸಾಮೂಹಿಕ ಪ್ರಯತ್ನದಿಂದ ಮಾತ್ರ ಸಾಧ್ಯ. ಸರ್ಕಾರ, ಶಿಕ್ಷಕರು, ಪೋಷಕರು ಮತ್ತು ಸಮಾಜದ ಎಲ್ಲರೂ ಒಟ್ಟಾಗಿ ಕೈಜೋಡಿಸಿದರೆ ಮಾತ್ರ, ನಮ್ಮ ಮಕ್ಕಳಿಗೆ ಉತ್ತಮ ಭವಿಷ್ಯವನ್ನು ಕಟ್ಟಿಕೊಡಲು ಸಾಧ್ಯ. ಇಲ್ಲವಾದರೆ, ಅಕ್ಷರ ಜ್ಞಾನವಿಲ್ಲದ ಮಕ್ಕಳ ಸಂಖ್ಯೆ ಹೆಚ್ಚುತ್ತಾ ಹೋಗಿ, ನಾಳಿನ ಭಾರತದ ಭವಿಷ್ಯ ಮಸುಕಾಗಬಹುದು. ಈ ಕುರಿತು ಪ್ರತಿಯೊಬ್ಬರೂ ಚಿಂತಿಸುವ ಸಮಯ ಬಂದಿದ್ದು, ಸಮಾಜದ ಸರ್ವತೋಮುಖ ಅಭಿವೃದ್ಧಿಗೆ ಶಿಕ್ಷಣವೇ ಶಕ್ತಿ ಎಂಬುದನ್ನು ಪ್ರತಿಯೊಬ್ಬರೂ ಅರಿತುಕೊಳ್ಳಬೇಕು.

## ಮೈಕ್ರೋ ನ್ಯೂಸ್

### ಜೂ.21 ರಂದು ಜೆಸ್ಕಾಂ ನಗರ ಗ್ರಾಹಕರ ಸಂವಾದ ಸಭೆ

**ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ನಗರದಲ್ಲಿನ ಉಪವಿಭಾಗ 1 ರ ಕಚೇರಿಯಲ್ಲಿ ಜೂ.21 ರಂದು ಮಧ್ಯಾಹ್ನ 4 ರಿಂದ 5 ರವರೆಗೆ ಗ್ರಾಹಕರ ಸಂವಾದ ಸಭೆಯನ್ನು ಹಮ್ಮಿಕೊಳ್ಳಲಾಗಿದೆ. ಹೊಸಪೇಟೆ ನಗರ ವ್ಯಾಪ್ತಿಯ ಗ್ರಾಹಕರ ಕುಂದು ಕೊರತೆಗಳು ಇದ್ದಲ್ಲಿ ಸಭೆ ಭಾಗವಹಿಸಿ ವಿದ್ಯುತ್ ಸಮ್ಯಸೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ನಗರ ಉಪ ವಿಭಾಗ 1ರ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ತಿಳಿಸಿದ್ದಾರೆ.

> ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
> ಡಿ..ವಿ.ಜಿ.

# ಅಕ್ಷರ ಕಲಿಕೆಯಲ್ಲಿ ನೆಲೆನಿಂತ ಅಲೆಮಾರಿ ಮಕ್ಕಳಿಗಿಲ್ಲ ಜಾತಿ-ಆದಾಯ ಪತ್ರ, ರೇಷನ್ ಕಾರ್ಡ್ ಆಧಾರ್ ಕಾರ್ಡ್!

■ **ಹಂಪಿ ಟೈಮ್ಸ್ ಕೂಡ್ಲಿಗಿ**

ಬೀದಿ ಬೀದಿ ಅಲೆಯುತ್ತಿದ್ದ ಅಲೆಮಾರಿ ಮಕ್ಕಳಿಗೆ ಅಕ್ಷರ ಜ್ಞಾನ ನೀಡಲು ಶಾಲೆಯ ಶಿಕ್ಷಕರು 1 ರಿಂದ 7ನೇ ತರಗತಿಯವರೆಗೆ ಯಾವುದೇ ರೀತಿಯ ನಿವಾಸಿ ದೃಢೀಕರಣ ಪತ್ರ, ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಇಲ್ಲದೆ ಪರದಾಡುತ್ತಿರುವ ಅಲೆಮಾರಿ ಜನರ ಮಕ್ಕಳಿಗೆ ಶಿಕ್ಷಣ ನೀಡಲು ಒತ್ತು ಕೊಟ್ಟಿರುವುದನ್ನು ಪಟ್ಟಣದ ಕೋರಖಣ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಕಂಡುಬಂದಿದೆ.

ಹೌದು ಕೂಡ್ಲಿಗಿ ಪಟ್ಟಣದ ಸಂಡೂರು ರಸ್ತೆಯಲ್ಲಿ ಹಲವು ವರ್ಷಗಳಿಂದ ಅಲೆಮಾರಿ ಜನಾಂಗದವರು ವಾಸ ಮಾಡುತ್ತಿದ್ದು ಅವರಿಗೆ ಯಾವುದೇ ರೀತಿಯ ವೋಟರ್ ಐಡಿ, ಆಧಾರ್ ಕಾರ್ಡ್, ನಿವಾಸಿ ದೃಢೀಕರಣ ಪತ್ರ, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಹಾಗೂ ವಾಸಿಸಲು ಮನೆ, ವಿದ್ಯುತ್, ಕುಡಿಯಲು ನೀರು ಸೇರಿದಂತೆ ಇತರೆ ಸರಕಾರದ ಸೌಲಭ್ಯಗಳು ಇಲ್ಲದೆ ಅಲೆಮಾರಿ ಜನರ ಮಕ್ಕಳಿಗೆ ಅಕ್ಷರ ಜ್ಞಾನದಿಂದ ಮಾತ್ರ ಬದುಕು ಬೆಳಕಾಗಲು ಸಾಧ್ಯ ಎಂಬುದನ್ನರಿತ ಈ ಶಾಲೆಯ ಮುಖ್ಯ ಶಿಕ್ಷಕಿ ಹಾಗೂ ಸಹ ಶಿಕ್ಷಕಿಯರು ಅಲೆಮಾರಿ ಮಕ್ಕಳ ಶಿಕ್ಷಣ ನೀಡಲು ಮುಂದಾಗಿದ್ದಾರೆ. ಶಿಕ್ಷಣ ಇಲಾಖೆಯ ಸಹಕಾರದೊಂದಿಗೆ ಅಲೆಮಾರಿ ಜನಾಂಗದವರಿಗೆ ಮನವೊಲಿಸಿ ಮಕ್ಕಳಿಗೆ ವಿದ್ಯಾಭ್ಯಾಸದಲ್ಲಿ ತೊಡಗಿಸಿದ್ದಾರೆ. 30ಕ್ಕೂ ಹೆಚ್ಚು ಮಕ್ಕಳು ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮಾಡಿದ್ದಾರೆ. ಅವರಲ್ಲಿ ಯಾವುದೇ ರೀತಿಯ ದಾಖಲಾತಿಗಳು ಇಲ್ಲದೆ 1 ರಿಂದ 7ನೇ ತರಗತಿಯವರೆಗೂ ವಿದ್ಯಾಭ್ಯಾಸ ಮಾಡುತ್ತಿದ್ದು, ಮುಂದಿನ ವಿದ್ಯಾಭ್ಯಾಸಕ್ಕೆ ಅಡೆತಡೆ ಉಂಟಾಗುತ್ತಿದೆ.. ಈಗ ನಮ್ಮ ಶಾಲೆಯಲ್ಲಿ 1ನೇ ತರಗತಿಯಲ್ಲಿ ಮೂವರು ವಿದ್ಯಾರ್ಥಿಗಳು, ಎರಡನೇ ತರಗತಿಯಲ್ಲಿ ಇಬ್ಬರು ವಿದ್ಯಾರ್ಥಿಗಳು ಹಾಗೂ 3ನೇ ತರಗತಿಯಲ್ಲಿ ಒಬ್ಬರು, 7ನೇ ತರಗತಿ ಇಬ್ಬರು ವಿದ್ಯಾಭ್ಯಾಸ ಮಾಡುತ್ತಿದ್ದು ಇದುವರೆಗೂ ಯಾವುದೇ ರೀತಿಯ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ, ನಿವಾಸಿ ದೃಢೀಕರಣ ಸೇರಿದಂತೆ ಇತರೆ ಯಾವುದೇ ರೀತಿಯ ದಾಖಲಾತಿಗಳು ಇರುವುದಿಲ್ಲ. ಇದಕ್ಕೆ ಸಂಬಂಧಿಸಿದ ಅಧಿಕಾರಿಗಳ ಗಮನಕ್ಕೆ ತಂದರು ಯಾವುದೇ ಅನುಕೂಲ ಈ ಮಕ್ಕಳಿಗೆ ದೊರೆಯುತ್ತಿಲ್ಲ. ಈ ಶಾಲೆಯಲ್ಲಿ ವಿದ್ಯಾಭ್ಯಾಸ ಮುಗಿಸಿ ಮುಂದಿನ ತರಗತಿಗೆ ದಾಖಲಾಗಲು ದೃಢೀಕರಣ ಪತ್ರ, ಆಧಾರ್ ಕಾರ್ಡ್ ಕಡ್ಡಾಯ ಎಂದು ಪ್ರೌಢ ಶಾಲೆಯಲ್ಲಿ ಮುಖ್ಯಸ್ಥರು ಮಕ್ಕಳಿಗೆ ಪ್ರವೇಶಾತಿ ನೀಡಲು ಹಿಂದೇಟು ಹಾಕುತ್ತಿದ್ದಾರೆ ಎಂಬುದು ಪಾಲಕರ ಅಭಿಮತವಾಗಿದೆ.




> ಅಲೆಮಾರಿ ಜನಾಂಗದ ವಿದ್ಯಾರ್ಥಿಗಳು ಸರ್ಕಾರಿ ಶಾಲೆಯಲ್ಲಿ ಓದುತ್ತಿದ್ದು ಅವರಿಗೆ ಯಾವುದೇ ರೀತಿಯ ಆಧಾರ್ ಕಾರ್ಡ್, ಜಾತಿ ಮತ್ತು ಆದಾಯ ಪ್ರಮಾಣ ಪತ್ರ ಸೇರಿದಂತೆ ಇತರೆ ಪ್ರಮಾಣ ಪತ್ರಗಳು ಇರುವುದಿಲ್ಲ ಎಂಬುದು ಮಾಹಿತಿ ನನ್ನ ಗಮನಕ್ಕೆ ಬಂದಿದೆ. ತಕ್ಷಣ ಶಾಲೆಗೆ ಹಾಗೂ ಅಲೆಮಾರಿ ಜನಾಂಗದವರು ವಾಸ ಮಾಡುತ್ತಿರುವ ಟೆಂಟ್‌ಗಳಿಗೆ ಭೇಟಿ ನೀಡಿ ಮಾಹಿತಿಯನ್ನು ಪಡೆದು, ಅಲೆಮಾರಿ ಜನಾಂಗದ ಮಕ್ಕಳ ಶಿಕ್ಷಣಕ್ಕೆ ಅನುಕೂಲ ಮಾಡುವೆ.
> – **ನೇತ್ರಾವತಿ ವಿ.ಕೆ** ತಹಶೀಲ್ದಾರ್, ಕೂಡ್ಲಿಗಿ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ ಕನ್ನಡ ದಿನ ಪತ್ರಿಕೆ
Searching for the perfect platform to promote your brand?
Want to reach more people?
Choose HAMPI TIMES
Scan to read epaper



HAMPI TIMES
Kannada Daily News paper
Print & Digital Edition
Contact : 94486 33038
E-mail: hampitimes@gmail.com
www.hampitimes.com

## ಯುವಜನತೆಯಲ್ಲಿ ರಕ್ತದಾನ ಪ್ರಜ್ಞೆ ಬೆಳೆಸುವುದು ಅತ್ಯಗತ್ಯ. ರಕ್ತದಾನ ಶಿಬಿರ ಉದ್ಘಾಟಿಸಿ ತಹಶೀಲ್ದಾರ ಆರ್.ಕವಿತಾ ಹೇಳಿಕೆ.



■ ಹಂಪಿ ಟೈಮ್ಸ್ ಹಗರಿಬೊಮ್ಮನಹಳ್ಳಿ.
ರಕ್ತದಾನದ ಶ್ರೇಷ್ಠತೆಯನ್ನು ಯುವಜನತೆ ಅರಿಬೇಕಿದೆ. ಜಾಗೃತಿ ಮೂಡಿಸುವ ಕಾರ್ಯ ಸಂಘಸಂಸ್ಥೆಗಳು ಮಾಡಬೇಕಿದೆ ಎಂದು ತಹಶೀಲ್ದಾರ್ ಆರ್. ಕವಿತಾ ಹೇಳಿದರು.

**ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ 600 ಯುನಿಟ್ ಸಂಗ್ರಹ ಉತ್ತಮ ಸ್ಪಂದನೆ.**

ಪಟ್ಟಣದ ಗುರುಭವನದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ತಾಲೂಕು ಸಾರ್ವಜನಿಕ ಆಸ್ಪತ್ರೆ, ತಾಲೂಕು ಸರ್ಕಾರಿ ನೌಕರರ ಸಂಘ, ಜೆಸಿಐ ಸಂಸ್ಥೆ ಸಹಭಾಗಿತ್ವದಲ್ಲಿ ಏರ್ಪಡಿಸಿದ್ದ ಸ್ವಯಂಪ್ರೇರಿತ ರಕ್ತದಾನ ಶಿಬಿರಕ್ಕೆ ಚಾಲನೆ ನೀಡಿ ಗುರುವಾರ ಮಾತನಾಡಿದರು, ರಕ್ತದಾನ ಮನುಷ್ಯನ ದೈಹಿಕ ಮತ್ತು ಮಾನಸಿಕ ಆರೋಗ್ಯದ ಮೇಲೆ ಸಕಾರಾತ್ಮಕ ಪರಿಣಾಮ ಬೀರುತ್ತದೆ. ರಕ್ತದಾನ ಮಾಡುವುದರಿಂದ ಅಪಘಾತಗಳಲ್ಲಿ ಗಾಯಗೊಂಡ ಗಾಯಾಳುಗಳಿಗೆ ಮತ್ತು ವಿವಿಧ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳ ಜೀವ ಉಳಿಸಲು ಉಪಯೋಗವಾಗುತ್ತದೆ. ಜನಸಾಮಾನ್ಯರಲ್ಲಿ ರಕ್ತದಾನದ ಬಗ್ಗೆ ತಪ್ಪು ಕಲ್ಪನೆಗಳಿದ್ದು, ಇಂತಹ ಶಿಬಿರಗಳಿಂದ ಜಾಗೃತಿ ಮೂಡಿಸುವುದು ಅಗತ್ಯವಾಗಿದೆ. ವಿವಿಧ ಸಾರ್ವಜನಿಕ ಸಂಘಸಂಸ್ಥೆಗಳ ಕೈ ಜೋಡಿಸಿ ಯಶಸ್ವಿ ರಕ್ತದಾನ ಶಿಬಿರವಾಗಿಸಿರುವುದು ಶ್ಲಾಘನೀಯ. ಯುವಜನರು ವರ್ಷಕ್ಕೆ ಕನಿಷ್ಟ ಎರಡು ಬಾರಿ ರಕ್ತದಾನ ಮಾಡಲು ಮುಂದಾಗಬೇಕಿ ಎಂದರು.

ಸರ್ಕಾರಿ ನೌಕರರ ಸಂಘದ ತಾಲೂಕಾಧ್ಯಕ್ಷ ಎಂ.ಪಿ.ಎಂ.ಮಂಜುನಾಥ್ ಮಾತನಾಡಿ, ರಕ್ತದಾನ ಇನ್ನೊಂದು ಜೀವವನ್ನುಳಿಸಲು ಸಕಾರಿಯಾಗುತ್ತದೆ. ದಿನನಿತ್ಯ ಆಸ್ಪತ್ರೆಗಳಲ್ಲಿ ರಕ್ತದ ಕೊರತೆಯಿಂದಾಗಿ ಬಹಳಷ್ಟು ಜನ ರಕ್ತಕ್ಕಾಗಿ ಅಲೆದಾಡುವುದು ಕಾಣಬಹುದು. ಪಟ್ಟಣದಲ್ಲಿ ಸ್ವಾಮಿ ವಿವೇಕಾನಂದ ಬ್ಲಡ್ ಬ್ಯಾಂಕ್ ಆದ ಮೇಲೆ ಪರಿಸ್ಥಿತಿ ಸ್ವಲ್ಪ ಸುಧಾರಿಸಿದೆ. ಮುಂಚೆ ರಕ್ತಕ್ಕಾಗಿ ಹೊಸಪೇಟೆಗೆ ಅಲೆದಾಡುವ ಅನಿವಾರ್ಯ ಸ್ಥಿತಿ ಇತ್ತು. ರಕ್ತದಾನದ ಬಗ್ಗೆ ಜನರಲ್ಲಿ ಮಾಹಿತಿ ನೀಡಿ ಜಾಗೃತಗೊಳಿಸುವುದು ನಮ್ಮೆಲ್ಲರ ಆದ್ಯ ಕರ್ತವ್ಯವಾಗಿದೆ. ರಕ್ತದಾನ ಶಿಬಿರಗಳಲ್ಲಿ ಸ್ವಯಂಪ್ರೇರಿತರಾಗಿ ಭಾಗವಹಿಸುವಂತಹ ಹಾಗೂ ತುರ್ತು ವೇಳೆ ರಕ್ತದಾನ ಮಾಡುವಂತಹ ಮನಸ್ಥಿತಿ ಎಲ್ಲರಲ್ಲೂ ಬರಬೇಕು ಎಂದರು.

ತಾಲೂಕು ವೈದ್ಯಾಧಿಕಾರಿ ಡಾ.ಪ್ರವೀಣ್ ಮಾತನಾಡಿ, ಸ್ವಯಂಪ್ರೇರಿತ ರಕ್ತದಾನ ಶಿಬಿರದಲ್ಲಿ ನಿರೀಕ್ಷೆಗೆ ಮೀರಿ ಉತ್ತಮ ಸ್ಪಂದನೆ ದೊರೆತಿದೆ. ಪುರಸಭೆ, ಪೊಲೀಸ್ ಇಲಾಖೆ ಸೇರಿ ತಾಲೂಕಿನ ವಿವಿಧ ಸಂಘಸಂಸ್ಥೆಗಳ ಪದಾಧಿಕಾರಿಗಳು ಹಾಗೂ ಸಾರ್ವಜನಿಕರ ಸಹಕಾರದಿಂದ 600 ಯೂನಿಟ್ ರಕ್ತ ಸಂಗ್ರಹವಾಗಿರುವುದು ಹೆಮ್ಮೆ. ಹೆಚ್ಚು ಜನ ಸ್ವಯಂಪ್ರೇರಿತವಾಗಿ ರಕ್ತದಾನ ಮಾಡಿ ಶಿಬಿರವನ್ನು ಯಶಸ್ವಿಗೊಳಿಸಿದ್ದಾರೆ ಎಂದರು.

ಈ ವೇಳೆ ಜಿಲ್ಲಾ ಕ್ಷಯ ನಿರ್ಮೂಲನ ವೈದ್ಯಾಧಿಕಾರಿ ಡಾ.ಭಾಸ್ಕರ್, ವೈದ್ಯಾಧಿಕಾರಿ ಡಾ.ಶಿವರಾಜ, ಆರೋಗ್ಯ ಇಲಾಖೆಯ ಶ್ರೀನಿವಾಸ ರೆಡ್ಡಿ, ಪ್ರಮೋದಿನಿ, ಆರ್.ಎನ್.ಬಸವರಾಜ, ಸೇವಾನಾಯ್ಕ್, ಸರ್ಕಾರಿ ನೌಕರರ ಸಂಘದ ತಾಲೂಕು ಕಾರ್ಯದರ್ಶಿ ಟಿ.ಸೋಮಶೇಖರ್, ಪದಾಧಿಕಾರಿಗಳಾದ ಎನ್.ಗುರುಬಸವರಾಜ, ಎನ್.ಮಂಜುನಾಥ, ಕೆ.ಪ್ರಕಾಶ, ಹಾಲಪ್ಪ, ವೀರಣ್ಣ, ಯಂಕಾರೆಡ್ಡಿ, ಜೆಸಿಐ ಸಂಸ್ಥೆಯ ಅಧ್ಯಕ್ಷ ದಿವಾಕರ ಗೌಡ, ಹಿರಿಯ ಜೆಸಿಗಳಾದ ಕೋರಗಲ್ ರಾಘವೇಂದ್ರ, ಡಾ.ಬಂಡ್ರಿ ವಿಶ್ವನಾಥ್, ಡಾ.ಕರಿಬಸಯ್ಯ, ನಾಗರಾಜ ಸೋಡದ್, ನಟರಾಜ ಬಾದಾಮಿ, ನವೀನ್ ಎಲಿಗಾರ್, ಅಮೃತ್ ಚಟ್ರಿಕಿ ಹಾಗೂ ಆಶಾ ಕಾರ್ಯಕರ್ತೆಯರು ಭಾಗವಹಿಸಿದ್ದರು.

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.** ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**
**– ಜಾಹೀರಾತು ವ್ಯವಸ್ಥಾಪಕರು.**

# ಕತ್ತೆ, ತೋಳ ಮತ್ತು ಕಾಡಿನ ರಾಜ.... ಬದುಕಿನ ಪಾಠ

ಅದೊಂದು ದೊಡ್ಡ ಕಾಡು. ಆ ಕಾಡಿನ ರಾಜನಾಗಿದ್ದ ಸಿಂಹ ಮೊದಲಿನ ಗತ್ತು, ಗಾಂಭೀರ್ಯಗಳನ್ನು ಉಳಿಸಿಕೊಂಡಿದ್ದರೂ ಇದೀಗ ವಯೋ ಸಹಜ ವೃದ್ಧಾಪ್ಯದ ತೊಂದರೆಗಳಿಂದ ಬಳಲುತ್ತಿತ್ತು. ಮತ್ತೆ ಕೆಲ ದಿನಗಳಿಂದ ಬೇಟೆಯಾಡಲು ಕೂಡ ಅದಕ್ಕೆ ತೊಂದರೆಯಾಗುತ್ತಿತ್ತು. ಸದಾ ತನ್ನ ಗುಹೆಯ ಮುಂದೆ ಮಲಗಿರುತ್ತಿದ್ದ ಸಿಂಹ ಆ ಹಾದಿಯಲ್ಲಿ ಹೋಗುವ ಚಿಕ್ಕಪುಟ್ಟ ಪ್ರಾಣಿಗಳ ಮೇಲೆ ಹಾರಿ ಸಾಯಿಸಿ ತಿನ್ನುವ ಮೂಲಕ ತನ್ನ ಹಸಿವನ್ನು ಹಿಂಗಿಸಿಕೊಳ್ಳುತ್ತಿತ್ತು. ಹೀಗಾಗಿ ಬಹಳಷ್ಟು ಕಾಡಿನ ಪ್ರಾಣಿಗಳು ಆ ದಾರಿಯಲ್ಲಿ ಹೋಗುವುದನ್ನೇ ತಪ್ಪಿಸುತ್ತಿದ್ದವು. ಗೊತ್ತಿಲ್ಲದ ಕೆಲವೇ ಪ್ರಾಣಿಗಳು ಸಿಂಹಕ್ಕೆ ಆಹಾರವಾಗುತ್ತಿದ್ದವು.

ಅದೊಂದು ದಿನ ಅದೇ ಹಾದಿಯಲ್ಲಿ ಹೋಗುತ್ತಿದ್ದ ತೋಳವೊಂದು ಸಿಂಹದ ಕೈಗೆ ಸಿಕ್ಕು ಬಿತ್ತು. ಇನ್ನೇನು ಸಿಂಹ ಅದನ್ನು ಮುಟ್ಟಬೇಕು ಎನ್ನುವಷ್ಟರಲ್ಲಿ ತೋಳ " ಅಯ್ಯಾ ಸಿಂಹವೇ! ನೀನು ಈ ಕಾಡಿನ ರಾಜ. ನಾನು ಒಂದು ಯಕಶ್ಚಿತ್ ತೋಳ. ಅದರಲ್ಲೂ ಹೊಟ್ಟೆಗೆ ಏನೂ ಇಲ್ಲದೆ ನನ್ನ ದೇಹ ಸಣಕಲಾಗಿದೆ. ನಿನಗೆ ಕೇವಲ ಎಲುಬು,ಮೂಳೆಗಳು ಮಾತ್ರ ಸಿಗುತ್ತವೆ. ನೀನು ಮನಸ್ಸು ಮಾಡಿ ನನ್ನನ್ನು ಹೋಗಲು ಬಿಟ್ಟರೆ ನಾನು ಖಂಡಿತವಾಗಿಯೂ ನಿನಗೆ ಹೊಟ್ಟೆ ತುಂಬುವಷ್ಟು ಮಾಂಸ ದೊರೆಯುವ ದೊಡ್ಡ ಪ್ರಾಣಿಯನ್ನು ಉಡುಗೊರೆಯಾಗಿ ತಂದುಕೊಡುತ್ತೇನೆ" ಎಂದು ಹೇಳಿತು.

ಇದೀಗ ಸಿಂಹ ತೋಳವನ್ನು ಮತ್ತೊಮ್ಮೆ ಪರಿಶೀಲನಾತ್ಮಕವಾಗಿ ನೋಡಿತು ತೋಳದ ಮಾತಿನಲ್ಲಿ ಯಾವುದೇ ಸುಳ್ಳಿರಲಿಲ್ಲ. ಅತ್ಯಂತ ಕೃಶವಾಗಿದ್ದ ತೋಳವನ್ನು ತಿಂದರೆ ಸಿಂಹದ ಹೊಟ್ಟೆ ತುಂಬುತ್ತಿರಲಿಲ್ಲ ಎಂಬುದು ಕೂಡ ಅಷ್ಟೇ ನಿಜವಾಗಿತ್ತು. ಆದ್ದರಿಂದ ತುಸು ಯೋಚಿಸಿದ ಸಿಂಹ ತೋಳವನ್ನು ಕುರಿತು "ಸರಿ... ಹಾಗಾದರೆ ಇನ್ನೊಂದು ಗಂಟೆಯಲ್ಲಿ ನನಗೆ ದೊಡ್ಡ ಪ್ರಾಣಿಯನ್ನು ತಂದು ಕೊಡು" ಎಂದು ಹೇಳಿತು.

'ಬದುಕಿದೆಯಾ ಬಡಜೀವವೇ' ಎಂದ ತೋಳ "ಖಂಡಿತವಾಗಿಯೂ ತಂದುಕೊಡುತ್ತೇನೆ ಮಹಾರಾಜ" ಎಂದು ತಲೆಬಾಗಿ ನಿಧಾನವಾಗಿ ಹೇಳಿ ಅಲ್ಲಿಂದ ಹೊರಟು ಬಂತು. ಮುಂದಿನ ಕೆಲ ನಿಮಿಷ ಕಾಡಿನ ಎಲ್ಲ ಕಡೆ ಓಡಾಡಿದರೂ ಅದಕ್ಕೆ ಸಣ್ಣಪುಟ್ಟ ಪ್ರಾಣಿಗಳೇ ದೊರೆಯುತ್ತಿದ್ದವು. ಅಂತಿಮವಾಗಿ ಕಾಡಿನ ಅಂಚಿನಲ್ಲಿದ್ದ ಕೆರೆಯ ಬಳಿ ಬಂದ ತೋಳಕ್ಕೆ ಅಲ್ಲೊಂದು ಕತ್ತೆ ನೀರು ಕುಡಿಯುತ್ತಿರುವುದು ಕಂಡುಬಂತು. ಅಬ್ಬ! ಇಷ್ಟೊಂದು ದಷ್ಟಪುಷ್ಟವಾಗಿರುವ ಕತ್ತೆಯನ್ನು ನಾನು ಒಯ್ದು ಕೊಟ್ಟರೆ ಸಿಂಹ ಖಂಡಿತವಾಗಿಯೂ ನನ್ನ ತಂಟೆಗೆ ಬರುವುದಿಲ್ಲ ಎಂದು ಯೋಚಿಸಿದ ತೋಳ ಕೂಡಲೇ ತನ್ನ ಯೋಜನೆಯನ್ನು ಕಾರ್ಯಗತಗೊಳಿಸಲು ಕತ್ತೆಯ ಬಳಿ ಬಂತು.



ವೀಣಾ ಹೇಮಂತಗೌಡ ಪಾಟೀಲ್
ಲೇಖಕರು, ಮುಂಡರಗಿ, ಗದಗ

Scan For Digital Colourful
HAMPI TIMES E-paper

"ಆಹಾ! ಅದೆಷ್ಟು ಚೆನ್ನಾಗಿ ಕಾಣುತ್ತಿರುವೆ, ಮಹಾರಾಜನಾಗಲು ನೀನೇ ಲಾಯಕ್ಕು" ಎಂದು ಹೊಗಳಿತು. ಧ್ವನಿ ಬಂದತ್ತ ತಿರುಗಿದ ಕತ್ತೆಗೆ ಅಲ್ಲಿ ಕಂಡದ್ದು ಕೃಶ ಕಾಯದ ತೋಳ ಮಾತ್ರ. ಸುತ್ತಲೂ ನೋಡಿದ ಕತ್ತೆಗೆ ಅಲ್ಲಿ ತಮ್ಮಿಬ್ಬರನ್ನು ಹೊರತುಪಡಿಸಿ ಬೇರಾರೂ ಕಾಣಲಿಲ್ಲ. ತುಸು ಅಪನಂಬಿಕೆಯಿಂದ "ನೀನು ನನಗೆ ಈ ಮಾತುಗಳನ್ನು ಹೇಳಿದೆಯಾ" ಎಂದು ಕತ್ತೆಯು ತೋಳವನ್ನು ಕೇಳಿತು.

"ನಿನ್ನ ಮುಂದೆ ಬೇರೊಬ್ಬರನ್ನು ಹೊಗಳಲು ನನಗೇನು ಹುಚ್ಚೇ! ಅದೆಷ್ಟು ಚೆನ್ನ ನಿನ್ನ ಮೈಮಾಟ. ನೀನು ನಡೆದು ಬರುತ್ತಿದ್ದರೆ ಅದೇನು ರಾಜ ಗಾಂಭೀರ್ಯ! ನಿನ್ನ ನಡಿಗೆಯ ಗತ್ತು ಸಿಂಹಕ್ಕೆ ಸಮನಾಗಿದೆ " ಎಂದು ತೋಳವು ಕತ್ತೆಯನ್ನು ಕುರಿತು ಹೇಳಿದಾಗ ನಿಜವಾಗಿಯೂ ಕತ್ತೆ ತುಸು ಉಬ್ಬಿತು.

"ಹಾಗೇನು ಇಲ್ಲ ಬಿಡು ತೋಳಣ್ಣ ನೀನು ಸುಮ್ಮನೆ ಮಾತಾಡ್ತೀಯಾ" ಎಂದು ಹೆಮ್ಮೆಯಾದರೂ ತೋರಿಸಿ ಕೊಡದೆ ತುಸು ಸಂಕೋಚದಿಂದ ಕತ್ತೆ ಹೇಳಲು "ಅಯ್ಯೋ ಕತ್ತೆಗೇನು ಗೊತ್ತು ಕಸ್ತೂರಿ ವಾಸನೆ ಅನ್ನೋದು ಇದಕ್ಕೆ ಇರಬಹುದು. ನಿನಗೆ ನಿನ್ನ ತಾಕತ್ತಿನ ಅರಿವೇ ಇಲ್ಲ ನೋಡು.. ಕಾಡಿನ ಮಹಾರಾಜನಾದ ಸಿಂಹಕ್ಕೆ ವಯಸ್ಸಾಗಿದೆ. ತನ್ನ ಉತ್ತರಾ ಧಿಕಾರಿಯನ್ನು ಆರಿಸುವ ಕೆಲಸವನ್ನು ಸಿಂಹ ಮಹಾರಾಜನು ನನಗೆ ವಹಿಸಿದ್ದಾನೆ, ಆದ್ದರಿಂದಲೇ ನಾನು ಮಹಾರಾಜನ ಉತ್ತರಾಧಿ, ಕಾರಿಯ ನಿರೀಕ್ಷೆಯಲ್ಲಿ ಕಾಡೆಲ್ಲಾ ಹುಡುಕಿದೆ ಅಂತಿಮವಾಗಿ ನನಗೆ ನೀನು ದೊರಕಿದೆ "ಎಂದು ಹೇಳಿತು.



ಇದರಿಂದ ಸಂತಸಗೊಂಡ ಕತ್ತೆ "ಓಹೋ,ಕಾಡಿನ ಮಹಾರಾಜನಾಗುವ ಯೋಗ್ಯತೆ ಅದೂ ನನಗೆ. ನೀನು ಹೇಳುವವರೆಗೂ ನನಗೆ ಗೊತ್ತೇ ಇರಲಿಲ್ಲ ನೋಡು ಎಂದು ಹೇಳಿತು ಅದಕ್ಕೆ ಉತ್ತರವಾಗಿ ತೋಳು "ನೀನು ಈ ಕೂಡಲೇ ನನ್ನೊಂದಿಗೆ ಬಾ... ನಾನು ನಿನ್ನನ್ನು ಮಹಾರಾಜನಿಗೆ ಭೇಟಿ ಮಾಡಿಸುವೆ" ಎಂದು ಹೇಳಿತು.

ಕೂಡಲೇ ಹಿಂದು ಮುಂದು ಯೋಚಿಸದ ಕತ್ತೆ ಮಹಾರಾಜನಾಗುವ ಆಸೆಯಿಂದ ತೋಳದ ಬೆನ್ನತ್ತಿ ಹೊರಟಿತು. ಇನ್ನೇನು ಗುಹೆಯ ಬಾಗಿಲ ಬಳಿ ಸಿಂಹ ಮತ್ತು ಕತ್ತೆಗಳ ಮುಖಾಮುಖಿಯಾಯಿತು ಎನ್ನುವಷ್ಟರಲ್ಲಿ ಹಸಿವಿನಿಂದ ಬಳಲಿದ ಸಿಂಹ ಕತ್ತೆಯ ಮೇಲೆ ಹಾರಿತು. ಗಾಬರಿಯಿಂದ ಹಾರಿದ ಕತ್ತೆಯ ಎರಡು ಕಿವಿಗಳು ಸಿಂಹದ ಕೈಯಲ್ಲಿ ಉಳಿದವು.. ಆದರೆ ಕತ್ತೆ ತಪ್ಪಿಸಿಕೊಂಡು ಓಡಿ ಬಿಟ್ಟಿತು.

"ಅಯ್ಯೋ ಸಿಂಹರಾಯ ಎಂಥ ಕೆಲಸ ಮಾಡಿಬಿಟ್ಟೆ, ಕೈಗೆ ಬಂದ ತುತ್ತು ಬಾಯಿಗೆ ಸಿಗದಂತೆ ಮಾಡಿದೆ...ಇರು ನಾನು ಕತ್ತೆಯನ್ನು ಕರೆತರುತ್ತೇನೆ" ಎಂದು ಹೇಳಿದ ನರಿ ಕತ್ತೆಯ ಹಿಂದೆ ಬೆನ್ನಟ್ಟಿ ಹೊರಟಿತು.

ಬಹುದೂರ ಓಡಿದ ಕತ್ತೆ ದಣಿವಾರಿಸಿಕೊಳ್ಳಲು ಒಂದೆಡೆ ನಿಂತಾಗ ಅದರ ಬಳಿ ಸಾರಿದ ನರಿ "ಏನು ಮಾಡಿಬಿಟ್ಟೆ ಕತ್ತೆರಾಯ ನೀನು! ಸಿಂಹ ಮಹಾರಾಜ ನಿನ್ನ ತಲೆಯ ಮೇಲೆ ಕಿರೀಟವನ್ನು ಇರಿಸಲು ನಿನ್ನೆರಡು ಕಿವಿಗಳನ್ನು ಕತ್ತರಿಸಿದರು.. ಅಷ್ಟಕ್ಕೇ ಹೆದರಿ ನೀನು ಓಡಿ ಬಂದುಬಿಟ್ಟೆಯಾ?. ಹೀಗೆ ಮಾಡಿದರೆ ಹೇಗೆ?" ಎಂದು ಕೇಳಿತು.

ಇರದ ಕಿವಿಯನ್ನು ನಿಮಿರಿಸುತ್ತ ಹಣೆಯಲ್ಲಿ ಚಿಂತೆಯ ಗೆರೆಗಳನ್ನು ಮೂಡಿಸಿದ ಕತ್ತೆ " ಅಯ್ಯೋ! ಎಂತಹ ಕೆಲಸವಾಯಿತು. ಈ ಮಾತನ್ನು ಮೊದಲೇ ನೀನು ನನಗೆ ಹೇಳಬೇಕಲ್ಲವೇ? ಸಿಂಹ ನನ್ನ ಮೇಲೆ ಹಾರಿ ನನ್ನ ಕಿವಿಗಳನ್ನು ಕತ್ತರಿಸಿದ ಕೂಡಲೇ ನಾನು ಭಯಪಟ್ಟೆ, ನನ್ನ ಜೀವಕ್ಕೆ ಆಪತ್ತು ಬಂತು ಎಂದು ಅಲ್ಲಿಂದ ಓಡಿ ಬಂದು ಬಿಟ್ಟೆ" ಎಂದು ಕತ್ತೆ ಹೇಳಿತು.

ಕೂಡಲೇ ತೋಳವು ಅದಕ್ಕೇ ನಾನು ನಿನ್ನನ್ನು ಕರೆದೊಯ್ಯಲು ಬಂದಿರುವುದು. ನಡಿ ಮತ್ತೊಮ್ಮೆ ಸಿಂಹ ರಾಜನನ್ನು ಭೇಟಿಯಾಗೋಣ" ಎಂದು ಹೇಳಲು ಕತ್ತೆ "ಆಯಿತು" ಎಂಬಂತೆ ನರಿಯೊಂದಿಗೆ ಮತ್ತೆ ಸಿಂಹದ ಬಳಿ ಬಂತು. ಮತ್ತೆ ಸಿಗದೇ ಹೋಗಬಹುದು ಎಂಬ ಕಾರಣದಿಂದ ಸಿಂಹ ಮತ್ತೊಮ್ಮೆ ತೋಳದ ಮೇಲೆರಗಲು ತೋಳದ ಬಾಲ ಮಾತ್ರ ಸಿಂಹದ ಪಂಜುಗಳಲ್ಲಿ ಸಿಲುಕಿಕೊಂಡು ಮತ್ತೊಮ್ಮೆ ಕತ್ತೆ ಭಯಪಟ್ಟು ಓಡಿಹೋಯಿತು.

" ಅದೆಷ್ಟು ಬಾರಿ ಕೆಲಸ ಕೆಡಿಸುತ್ತೀಯಾ ಮಹಾರಾಜ" ಎಂದು ಬೇಸರಗೊಂಡ ತೋಳ ಮತ್ತೆ ಕತ್ತೆಯ ಬೆನ್ನಟ್ಟಿ ಹೋಯಿತು. "ಇದೇನು ಹುಡುಗಾಟ ಮಾಡ್ತೀಯಾ? ಯಾಕೆ ಹೀಗೆ ಪದೇ ಪದೇ ಓಡಿ ಹೋಗುತ್ತಿರುವೆ? ಎಂದು ತೋಳ ಕತ್ತೆಯನ್ನು ನಿಲ್ಲಿಸಿ ಕೇಳಲು "ಅಯ್ಯೋ, ನಿನ್ನ ಮಾತು ಕೇಳಿದರೆ ಅಷ್ಟೇ ಆ ಸಿಂಹ ನನ್ನ ಬಾಲವನ್ನು ಕತ್ತರಿಸಿ ಹಾಕಿತು" ಎಂದು ಕತ್ತೆ ಹೇಳಿತು.

" ಬಾಲವನ್ನು ಕತ್ತರಿಸದೆ ಮತ್ತಿನ್ನೇನು ಮಾಡ್ತಾರೆ.. ಸಿಂಹಾಸನದ ಮೇಲೆ ಕೂರಲು ನಿನಗೆ ಬಾಲದ ಅವಶ್ಯಕತೆ ಇಲ್ಲ, ಅದರಿಂದ ನಿನಗೆ ತೊಡಕುಂಟಾಗುವುದೇ ಹೆಚ್ಚು... ಆದ್ದರಿಂದ ಸಿಂಹ ನಿನ್ನ ಬಾಲವನ್ನು ಕತ್ತರಿಸಿ ಹಾಕಿತು. ನೀನು ಹೀಗೆ ಪದೇಪದೇ ನಡೆದುಕೊಂಡರೆ ಸಿಂಹಕ್ಕೆ ಕೋಪ ಬರುವುದಿಲ್ಲವೇ?" ಎಂದು ಕೇಳಿತು.

"ಹೌದೇ! ಹಾಗಾದರೆ ನನ್ನನ್ನು ಸಿಂಹಾಸನದ ಮೇಲೆ ಕೂರಿಸಲೇಬೇಕೆಂಬ ಸಂಕಲ್ಪದಿಂದ ಸಿಂಹವು ನನ್ನ ಬಾಲವನ್ನು ಕತ್ತರಿಸಿದೆಯೆ! ನನಗೆ ಇದು ಗೊತ್ತಾಗಲೇ ಇಲ್ಲ ಅದಕ್ಕೆ ನನ್ನನ್ನು ನೀವೆಲ್ಲ ಕತ್ತೆ ಎಂದು ಕರೆಯುವುದು ಅನ್ನಿಸುತ್ತೆ. ಸರಿ ಹಾಗಾದರೆ ಹೋಗೋಣ ನಡೆ ಈ ಬಾರಿ ನಾನು ಧೈರ್ಯದಿಂದ ಸಿಂಹದ ಗುಹೆಯೊಳಗೆ ಬರುತ್ತೇನೆ ಇನ್ನು ಮುಂದೆ ಹೇಗಿದ್ದರೂ ನಾನೇ ಅಲ್ಲವೇ ರಾಜ್ಯವನ್ನು ಆಳುವುದು" ಎಂದು ಹೇಳಿ ಠೀವಿಯಿಂದ ಸಿಂಹದ ಗುಹೆಯ ಬಳಿ ಬಂತು.

ಈಗಾಗಲೇ ಎರಡು ಬಾರಿ ತನ್ನಿಂದ ತಪ್ಪಿಸಿಕೊಂಡು ಹೋಗಿದ್ದ ಕತ್ತೆಯನ್ನು ನೋಡಿ ಸಿಂಹವು ಮೇಲಿಂದ ಹಾರಿ ಕತ್ತೆಗೆ ಮಿಸುಕಾಡಲು ಆಸ್ಪದವೇ ಸಿಗದಂತೆ ಅದರ ಕುತ್ತಿಗೆಯನ್ನು ಮುರಿದು ಕೊಂದು ಹಾಕಿತು.

"ಮಹಾರಾಜ ನಾನು ಕೊಟ್ಟ ಮಾತಿಗೆ ತಪ್ಪದೆ ನಡೆದುಕೊಂಡಿದ್ದೇನೆ.. ಇನ್ನು ನೀನುಂಟು ಕತ್ತೆಯ ಶರೀರ ಉಂಟು" ಎಂದು ಹೇಳಿ ಸಿಂಹಕ್ಕೆ ನಮಸ್ಕರಿಸಿ ತೋಳ ಅಲ್ಲಿಂದ ಹೊರಟುಹೋಯಿತು.

ನೋಡಿದಿರಾ ಸ್ನೇಹಿತರೆ! ಈ ಜಗತ್ತಿನಲ್ಲಿ ಸಿಂಹದಂತಹ ಶೌರ್ಯವುಳ್ಳವರು, ತೋಳದಂತಹ ವಂಚಕ ಬುದ್ಧಿಯವರು ಮತ್ತು ಕತ್ತೆಯಂತಹ ಮಂದ ಬುದ್ಧಿಯವರು ಇರುತ್ತಾರೆ. ಎಷ್ಟೋ ಬಾರಿ ತಮ್ಮ ಗುರಿ ಸಾಧನೆಗೆ ಇತರರ ಜೀವವನ್ನು ತೆಗೆಯಲು ಹೇಸದ ತೋಳದಂತಹ ಜನರು ಇರುವ ಜಗತ್ತಿನಲ್ಲಿ ನಾವು ಹೊಗಳಿಕೆಗೆ ಹಿಗ್ಗದೆ,ತೆಗಳಿಕೆಗೆ ಕುಗ್ಗದ ಮನಸ್ಥಿತಿಯನ್ನು ಬೆಳೆಸಿಕೊಳ್ಳಬೇಕು. ಬೇರೊಬ್ಬರು ನಮ್ಮ ಮೇಲೆ ಆರೋಪಿಸುವ ದೊಡ್ಡ ದೊಡ್ಡ ಗುಣಗಳು ನಮ್ಮದೇ ಎಂದು ಭಾವಿಸುವುದನ್ನು ಬಿಡಬೇಕು.

"ಕಾರ್ಯವಾಸಿ ಕತ್ತೆ ಕಾಲು" ಎಂಬ ಗಾದೆಯಂತೆ ತಮ್ಮ ಕೆಲಸ ಆಗಬೇಕೆಂದರೆ ಕತ್ತೆಯ ಕಾಲನ್ನು ಬೇಕಾದರೂ ಹಿಡಿಯುವಂತಹ ವಂಚಕರು ನಮ್ಮಲ್ಲಿದ್ದಾರೆ.

ಓರ್ವ ವ್ಯಕ್ತಿಯನ್ನು ಒಂದು ಬಾರಿ ಮೋಸ ಮಾಡಬಹುದು ಇಲ್ಲವೇ ಎರಡು ಬಾರಿ ಮೋಸ ಮಾಡಬಹುದು ಆದರೆ ಎಲ್ಲಾ ವ್ಯಕ್ತಿಗಳನ್ನು ಎಲ್ಲಾ ಕಾಲದಲ್ಲಿಯೂ ಮೋಸ ಮಾಡಲು ಸಾಧ್ಯವಿಲ್ಲ.. ಹಾಗೆ ಪದೇಪದೇ ಮೋಸ ಹೋಗುವವರು ಕತ್ತೆಯಂತೆ ತಮ್ಮ ಬದುಕನ್ನು ಕೊನೆಗಾಣಿಸಿಕೊಳ್ಳುತ್ತಾರೆ. ಪ್ರತಿ ಬಾರಿಯೂ ಮೋಸ ಹೋಗುತ್ತಾರೆ ಎಂದರೆ ಅದು ಅವರ ದಡ್ಡತನವಲ್ಲದೆ ಮತ್ತೇನು ಅಲ್ಲ.

ಬದುಕಿನ ಈ ಪಯಣದಲ್ಲಿ ನಾವು ಬೇರೆಯವರಿಗೆ ಪೂರಕವಾಗಿ ಬದುಕಬೇಕು ನಿಜ.... ಆದರೆ ಬೇರೆಯವರ ಅನುಕೂಲಕ್ಕೆ ನಮ್ಮನ್ನು ನಾವು ಸಂಪೂರ್ಣವಾಗಿ ಹತ್ತಿಕ್ಕಿಕೊಂಡರೆ ಅಂತಹ ಬದುಕಿಗೆ ಯಾವ ಅರ್ಥವೂ ಇಲ್ಲ. ಸ್ವತಂತ್ರ ಚಿಂತನೆ ಮತ್ತು ವೈಚಾರಿಕ ಪ್ರವೃತ್ತಿಗಳು ಸದಾ ನಮ್ಮದಾಗಿರಬೇಕು ನಿಶ್ಚಲವಾದ ಮನಸ್ಥಿತಿ ನಮ್ಮೆಲ್ಲರನ್ನು ಕಾಯಲಿ ಎಂಬ ಆಶಯದೊಂದಿಗೆ.

# ಮರೆಯಾಗುತ್ತಿರುವ ಮಗ್ಗಿ ಜಡೆ ಸಂಭ್ರಮ

ಮುತ್ತಿನ ಮುಂಗಾರಿನ ಹನಿ ಭೂಸ್ಪರ್ಶಿಸಿದರೆ ಮುಗಿಲ ಮಲ್ಲಿಗೆ ಮಹಿಳೆಯರ ಮುಡಿ ಅಲಂಕರಿ ಸುವುದು.

ಹೆಣ್ಣು ಸದಾಅಂಲಂಕಾರ ಪ್ರಿಯೆ. ಅಲಂಕಾರಗಳಲ್ಲಿ ಮಲ್ಲಿಗೆ ಮೊಗ್ಗನ್ನು ಪೋಣಿಸುವುದು ಕಟ್ಟುವುದೂ ಒಂದು ಕಲೆ. ಮೊಗ್ಗಿನ ಜಡೆಯಿಲ್ಲದೆ ಮದುಮಗಳ ಅಲಂಕಾರ ಪರಿಪೂರ್ಣವಲ್ಲ ಎನ್ನುವಂತ ಕಾಲವೊಂದಿತ್ತು. ಅಂಥದ್ದೊಂದು ಜಡೆಗಾಗಿಯೇ ಹುಡುಕುವ ಕಾಲ ಹಿಂದೆ ಹೋಗುತ್ತಿದೆಎನ್ನುವುದು ಮಾತ್ರ ಪ್ರಸ್ತುತವಾಗಿದೆ.

ಮೊಗ್ಗಿನ ಜಡೆಯ ಭಾವನೆ ಹಾಗೂ ಸೌಂದರ್ಯ ಎರಡನ್ನೂಸಮೀಕರಿಸಿ ಹೂವಿನ ಸೊಗಸನ್ನುಎಲ್ಲೆಡೆ ಪಸರಿಸಲು ಮಣಿಗಳಂತೆ ಪೋಣಿಸಿದ ಮೊಗ್ಗಿನ ಜಡೆಗಳನ್ನು ಯಾವಾಗ ಬೇಕಾದರೂ ಹಾಕಿಕೊಳ್ಳಲಿಕ್ಕಾಗುವುದಿಲ್ಲ. ಅದಕ್ಕೊಂದು ಸಂದರ್ಭಅನ್ನುವ ಕಾಲವೆಂದರೆಅದರಲ್ಲೂ ಮೇ ಜೂನ್ ತಿಂಗಳಲ್ಲಿ ಗ್ರಾಮೀಣ ಭಾಗದಲ್ಲಷ್ಟೇಅಲ್ಲದೆ ನಗರ, ಪಟ್ಟಣಗಳಲ್ಲಿಯೂ ಚಿಕ್ಕ ಹೆಣ್ಣು ಮಕ್ಕಳಿಂದ ಹಿಡಿದು ಹಿರಿಯ ಮಹಿಳೆಯವರೆಗಿನ ಹೆಂಗಳೆಯರು ಮಲ್ಲಿಗೆ ಮೊಗ್ಗಿನಜಡೆಹಾಕಿಹಾಕಿಸಿ ಪೋಟೋತೆಗೆಸುವುದು ಒಂದುರೀತಿಯ ಸಂಪ್ರದಾಯದಂತಾಗಿದೆ.

ಸುಮಾರು ನಾಲ್ಕೈದು ತಾಸಿನ ಈ ಸೂಕ್ಷ್ಮಾತಿಕಲೆಯು ಗ್ರಾಮೀಣ ಮಹಿಳೆಯರ ಕೌಶಲದ ಅನಾವರಣವಾಗಿದೆ. ಹಿಂದೆ ತಾಳೆ (ಕೇದಗೆ) ಹೂವಿನ ರೇಕುಗಳನ್ನು ಕತ್ತರಿಸಿ ಜೋಡಿಸಿ ಅದರ ಮೇಲೆ ಮೊಗ್ಗುಗಳನ್ನು ಪೋಣಿಸುತ್ತಿದ್ದ ಕಾಲ ಒಂದಿತ್ತು.



ಕೇದಿಗೆಯ ಕಂಪು ವಾರಗಟ್ಟಲೇ ಸುವಾಸನೆ ಭರಿತವಾಗಿರುತ್ತಿತ್ತು. ಈಗ ಇದೊಂದು ಅಪರೂಪ. ಅದರ ಬದಲಿಗೆ ನುಣುಪಾದರಟ್ಟಿನ ಪೇಪರ್, ಎಲೆ, ಬಾಳೆ ದಿಂಡು ಮುಂತಾದವುಗಳನ್ನು ಆಸರೆಗಾಗಿ ಬಳಸಿ ಮಲ್ಲಿಗೆ ಮೊಗ್ಗಿಗೆ ಪೋಣಿಸಿ, ಅದಕ್ಕೆಕುಚ್ಚನ್ನು ಅಳವಡಿಸಿ ಅಂದವಾದ ಮಲ್ಲಿಗೆ ಮೊಗ್ಗಿನ ಜಡೆಯನ್ನು ಸಿದ್ಧಪಡಿಸುತ್ತಿದರು.

ಅದರಲ್ಲೂಉತ್ತರಕರ್ನಾಟಕದ ಬಹುತೇಕ ಹೆಂಗಳೆಯರ ಅಚ್ಚುಮೆಚ್ಚಿನ, ಇನ್ನೂ ಹೆಚ್ಚಾಗಿ ಮೊದಲ ತಾಯ್ತನದ ಬಯಕೆಯಲ್ಲಿ ಮಗ್ಗಿ ಜಡೆ ಹೆಣೆಸುವುದು ಮಲ್ಲಿಗೆ ಹೂವಿನ ಸೀಜನಲ್ಲಿ ಹೆಚ್ಚು ಪ್ರಚಲಿತ.

ಅನೇಕ ತಾಯಂದಿರುಗರ್ಭಧಾರಣೆಯ ಫೋಟೋ ಶೂಟ್ ನಡೆಸುವ ಮೂಲಕ ಆ ಅಮೂಲ್ಯ ಕ್ಷಣಗಳನ್ನು ಸೆರೆಹಿಡಿದಿಟ್ಟುಕೊಳ್ಳುವ ಪರಿಪಾಠ ವಾಗಿದೆ. ತಾಯ್ತನದ ಸೌಂದರ್ಯವನ್ನು ಚಿತ್ರಿಸಲು ಅತ್ಯಾಧುನಿಕ ಟ್ರೆಂಡಿಂಗ್ ವ್ಯೂಗಳಾದ ಬೆಬಿ ಬಂಪ್, ಪ್ರೇಗ್ನೆಂಸಿ ಪೋಟೋಶೂಟ್ ಗಳಂತ ಕಾಲದಲ್ಲಿ ಮಗ್ಗಿ ಜಡಿಯಂತಂಹ ಸಂಪ್ರದಾಯಿಕ ಕಲೆ ಮರೆಯಾಗುತ್ತಿರುವುದು ಅತ್ಯಂತ ಖೇದದ ಸಂಗತಿ.

ಮನೆಮಂದಿಯಲ್ಲ ಸೇರಿ ಮೊಗ್ಗಿನ ಜಡೆ ಸಿದ್ದಪಡಿಸಿ ಅದನ್ನು ಹಾಕಿಕೊಂಡುಕನ್ನಡಿ ಹಿಂದೆ ಮುಂದೆ ಕಾಣು ವಂತೆ ಪೋಟೊತೆಗೆಸುವುದರಲ್ಲಿಛಾಯಾ ಗ್ರಾಹಕನಕೌಶಲ್ಯವನ್ನು ಹೆಚ್ಚಿಸುತ್ತಿದ್ದ ಆ ಕಾಲದ ಪೋಟೊ ಮತ್ತು ಪೋಟೊಗ್ರಾಫರ್ ಕೂಡ ಕಣ್ಮರೆಯಾಗಿರುವುದು ಮಾತ್ರ ನಿಜ.

ಗ್ರಾಮೀಣ ಭಾಗದ ಹೆಂಗಳೆಯರ ಕರಕುಶಲ ಕಲೆಗೆ ಹೆಚ್ಚು ಗೌರವತಂದುಕೊಡುತ್ತಿದ್ದದ್ದು ಮಾತ್ರ ಇಂದು ಅಳುವಿನಂಚಿನಲ್ಲಿದೆ. ಮರೆಯಾಗುತ್ತಿರುವ ಮಗ್ಗಿ ಜಡೆಯುಆಧುನಿಕ ಕಾಲಕ್ಕೆ ತಕ್ಕನಾಗಿ ಬದಲಾದಜನ ಮನ ಸದಾ ಹೊಸತನದಜೊತೆಗೆ ಸಂಪ್ರದಾಯಿಕ ಸಿರಿತನವನ್ನು ಹೊತ್ತು ಮತ್ತೇ ಮುನ್ನಲೆಗೆ ಕೊಂಡೊಯ್ಯಲಿ ಎನ್ನುವುದು ಮಾತ್ರ ನಮ್ಮಆಶಯ.

**– ಕೆ.ಎಂ.ಶಿವಶಂಕರಯ್ಯ ಶಿಕ್ಷಕರು, ಹಗರಿಬೊಮ್ಮನಹಳ್ಳಿ, ವಿಜಯನಗರ**



Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055

- Admissions
- Requirements
- Firm Branding
- Public Notice
- Change of Name

"Thousands of eyes, one newspaper. 'Hampi Times' delivers your message directly to Hampi Times engaged readers."

HAMPI TIMES Kannada Daily
Print & Digital News Paper

BOOK NOW! Scan to Read

- Obituary
- Remembrance
- Birthday wish ads
- Events Display &
- Classified ads

# HAMPI TIMES, Bamboo Bazaar, Nr Valmiki Circle, Hosapete-583201, Vijayanagara Dist. 9482599089 / 9448633038


## ಮೈಕ್ರೋ ನ್ಯೂಸ್

### ಮಳೆ

ಕವಿದ ಮೋಡವು ಕರಗಿ
ಮಳೆಯಾಗಿ ಸುರಿದಾಗ
ಧರೆಯ ಒಡಲೊಳಗಿಂದ
ಹಚ್ಚಹಸಿರು ಕೊನರಿದಾಗ

ರೈತನ ಮೊಗದಿ ಮೂಡಿ
ಮಂದಹಾಸದ ಗೆರೆಯು
ತುಂಬಿ ಹರಿಯುವುದು
ಹಳ್ಳಕೊಳ್ಳ ನೀರತೊರೆಯು.

ನೇಗಿಲನು ಹಿಡಿಯುತಲಿ
ರಾಸುಗಳ ಮೈದಡವುತಲಿ
ಹೊರಡುವನು ಕೃಷಿಕನು
ಹೊಲಗದ್ದೆಗೆ ಉಳುಮೆಗಾಗಿ

ಮಳೆ ಮುತ್ತಾಗಿ ಸುರಿಯಲಿ,
ದವಸಧಾನ್ಯ ಕಣಜ ತುಂಬಲಿ
ಪ್ರಕೃತಿ ಮಾತೆಯ ದಯವಿರಲಿ
ಭುವಿಯು ಹಸಿರಾಗಿ ನಳನಳಿಸಲಿ.

– ಮಮತಾ ಶೃಂಗೇರಿ

### ಯೋಗ, ಯೋಗ, ಯೋಗ...



ಜಗಮಯವಾಗಲಿ ನನ್ನಯ ಯೋಗ....!!
ತಂದೆಯಾಗಿ, ಗುರುವಾಗಿ "ಶ್ರೀ ಮಹರ್ಷಿ
ಪತಂಜಲಿಯವರು "ಜಗಕೆ ನೀಡಿದರು
ಅಸಾಮಾನ್ಯ ಮಗುವನು....
ಹಾ ಹಾ ಹಾ.. ನಾನು ಯೋಗ, ನಾನು
ಯೋಗ..ಜನರ ಆರೋಗ್ಯ ಕಾಪಾಡುವ
ಗುರಿಯು ನನ್ನದು. ॥1॥

ಮೊಮ್ಮಗನಾಗಿ ಅಜ್ಜ ಅಜ್ಜಿಯ..
ಡಯಾಬಿಟಿಸ್ , ಹೈಪೇರಟೆನ್ಶನ್
ನಿಯಂತ್ರಣ ಮಾಡುತಿರಲು....
ಹಾ ಹಾ ಹಾ.. ನಾನು ಯೋಗ, ನಾನು
ಯೋಗ.. ಜನರ ಆರೋಗ್ಯ ಕಾಪಾಡುವ
ಗುರಿಯು ನನ್ನದು.॥2॥

ಅಣ್ಣನ ಕಣ್ಣುಗಳು ನಾಲ್ಕು ಆಗಿವೇ...
ಕಾಡುಸುವರು ನನ್ನ ಅಣ್ಣನನ್ನು
ಸೋಡಾಬುಡ್ಡಿಯೆಂದು... ನೀಡಿದೆ ನಾ
ಅವನಿಗೆ "ತ್ರಾಟಕ" ಎಂಬ
ಉಪಾಯವನ್ನು..
ಹಾ ಹಾ ಹಾ.. ನಾನು ಯೋಗ..
ನಾನು ಯೋಗ ಜನರ ಅರೋಗ್ಯ
ಕಾಪಾಡುವ ಗುರಿಯು ನನ್ನದು...॥3॥

ಅಕ್ಕ–ತಂಗಿಯರು ಹಾಯಾಗಿರುವರು,
ಖುಷಿಯಾಗಿರುವರು ದಿನವು...
ಯಾಕೆಂದ್ರೆ.. ಅವರು ನನ್ನನು
ಬ್ರಾಹ್ಮೀಮುಹೂರತದಲ್ಲಿ ದಿನುವು
ಜೀವನದಲ್ಲಿ ಅಳವಡಿಸಿಕೊಂಡಿರಲು..
ಹಾ ಹಾ ಹಾ.. ನಾನು ಯೋಗ, ನಾನು
ಯೋಗ ಜನರ ಅರೋಗ್ಯ ಕಾಪಾಡುವ
ಗುರಿಯು ನನ್ನದು...॥4॥

ಗೆಳಯ, ಗೆಳತಿಯರು ಕೋಪ, ತಾಪದಿಂದ
ಕಷ್ಟ ಪಡುತಿರಲು ನೋಡಲಾರೆನು ಇದನ್ನು
ನೋಡಲಾರೆ...
"ಪ್ರಾಣಾಯಾಮ" ಎಂಬ ಉಪಾಯ
ನೀಡಿದೆ...
ಯೋಗ,ಯೋಗ ನಾನು
ಜಗಮಯವಾಗಿರಲು..
ನೀವು ನನ್ನ ಪಾಲಿಸಿ ಸಂಪೂರ್ಣ
ಅರೋಗ್ಯ ನಿಮ್ಮದಾಗಿಸಿ...
ಒಂದು ಭೂಮಿ, ಒಂದು ಅರೋಗ್ಯ

– ಜ್ಯೋತಿ ಎಚ್ ತಳವಾರ


ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com


# ಸಚಿವ ಸಂಪುಟ ಸಭೆಯ ಪ್ರಮುಖ ನಿರ್ಣಯಗಳು



■ ಹಂಪಿ ಟೈಮ್ಸ್ ಬೆಂಗಳೂರು

ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರ ಹುದ್ದೆಗೆ ಸಂಜಯ್ ಬಿ.ಭಟ್ ನಿವೃತ್ತ ಸರ್ಕಾರಿ ಅಭಿಯೋಜಕರನ್ನು ನೇಮಕ ಮಾಡಲು ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ. ಕರ್ನಾಟಕ ಲೋಕಾಯುಕ್ತ ಸಂಸ್ಥೆಯಲ್ಲಿ ಖಾಲಿಯಿರುವ ಅಪರ ನಿಬಂಧಕರು (ವಿಚಾರಣೆಗಳು) ಹುದ್ದೆಗೆ ರಮಾಕಾಂತ ಚವ್ಹಾಣ, ನಿವೃತ್ತ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಧೀಶರನ್ನು ನೇಮಕ ಮಾಡಲು ಸಚಿವ ಸಂಪುಟ ನಿರ್ಧರಿಸಿದೆ.

**ಅಪ್ಸರಕೊಂಡ– ಮುಗಲಿ ಕಡಲ ವನ್ಯ ಜೀವಿಧಾಮ**

ಅರಣ್ಯ, ಜೀವಿಪರಿಸ್ಥಿತಿ ಮತ್ತು ಪರಿಸರ ಇಲಾಖೆಯಡಿ ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ ಸಮುದ್ರ ತೀರದ 6 ಕಿ.ಮೀ ವರೆಗಿನ ಪ್ರದೇಶ ಹಾಗೂ ಅರಣ್ಯ ಪ್ರದೇಶವನ್ನೊಳಗೊಂಡಂತೆ ಒಟ್ಟು 5959.322 ಹೆಕ್ಟೇರ್ ಪ್ರದೇಶವನ್ನು ಅಪ್ಸರಕೊಂಡ– ಮುಗಲಿ ಕಡಲ ವನ್ಯ ಜೀವಿಧಾಮ ಎಂದು ಘೋಷಿಸಲು ಸಚಿವ ಸಂಪುಟ ನಿರ್ಧರಿಸಿದೆ.

ಕಡಲ ವನ್ಯಜೀವಿ ಧಾಮದಲ್ಲಿ ಸಾಂಪ್ರದಾಯಿಕ ಮೀನುಗಾರಿಕೆ ಹಾಗೂ ಮೀನುಗಾರರ ದೋಣಿಗ ಪ್ರವೇಶಕ್ಕೆಣಟಿಜಜಜಿಟಿಜಜ ನಿರ್ಭಂಧವಿಲ್ಲ. ಅಲ್ಲಿನ ಜನರ ಅಸ್ತಿತ್ವದಲ್ಲಿರುವ ಹಕ್ಕುಗಳಿಗೆ ಯಾವುದೇ ನಿರ್ಭಂಧವಿಲ್ಲ. ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರ 8.21 ಕಿ.ಮೀ ಸಮುದ್ರ ತೀರದ ಆರು ಕಿ.ಮೀ ಸಮುದ್ರದವರೆಗಿನ ಪ್ರದೇಶ ಹಾಗೂ 835 ಹೆಕ್ಟೇರ್ ಅರಣ್ಯ ಪ್ರದೇಶವನ್ನು ಒಳಗೊಂಡಂತೆ ಅಪ್ಸರಕೊಂಡ ಮುಗಲಿ ಕಡಲ ವನ್ಯ ಜೀವಿಧಾಮ ಎಂದು ಘೋಷಿಸಲಾಗಿದೆ. ನೀರನ ಜೀವಿಗಳ ರಕ್ಷಣೆಯ ಪ್ರಮುಖ ಉದ್ದೇಶದಿಂದ ಈ ಕ್ರಮ ಕೈಗೊಳ್ಳಲಾಗಿದೆ ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಹಾಗೂ ಪ್ರವಾಸೋದ್ಯಮ ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು.

**ಸರ್ಕಾರಿ ನೌಕರರಿಗೆ ನಗದು ರಹಿತ ಆರೋಗ್ಯ ಯೋಜನೆಗೆ ಅನುಮೋದನೆ**

ಸರ್ಕಾರಿ ಇಲಾಖೆಗಳಲ್ಲಿ ಗುತ್ತಿಗೆ, ಹೊರಗುತ್ತಿಗೆ ಮತ್ತು ಗೌರವಧನದ ಆಧಾರದ ಮೇಲೆ ಕೆಲಸ ಮಾಡುತ್ತಿರುವ ಸುಮಾರು 3 ಲಕ್ಷ ಸಿಬ್ಬಂದಿಗಳು ಮತ್ತು ಅವರ ಅವಲಂಬಿತರಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ವಾರ್ಷಿಕವಾಗಿ 5.00 ಲಕ್ಷಗಳವರೆಗೆ ನಗದು ರಹಿತ ಆರೋಗ್ಯ ಯೋಜನೆಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಸಿಬ್ಬಂದಿಗಳಿಂದ ಮಾಸಿಕ 100 ರೂ.ಗಳ ವಂತಿಗೆ ಮತ್ತು ಸರ್ಕಾರದಿಂದ ಉಳಿಕೆ ಹಣವನ್ನು ಭರಿಸಲು ನಿರ್ಧರಿಸಿದೆ.

**ಎ.ಆರ್.ಎಸ್ : ನಾಮನಿರ್ದೇಶನ ಮಾಡುವ ಅಧಿಕಾರದಲ್ಲಿನ ಬದಲಾವಣೆ**

ಕರ್ನಾಟಕ ನೋಂದಣಿ ಸಂಘಗಳ ಕಾಯ್ದೆ 1960ರ ಪ್ರಕಾರ ಸಂಘಗಳಾಗಿ ನೋಂದಾಯಿಸಲಾದ ಆರೋಗ್ಯ ರಕ್ಷಾ ಸಮಿತಿಗಳು (ಎ.ಆರ್.ಎಸ್) ಆಡಳಿತ/ ಸಾಮಾನ್ಯ ಸಭೆಯ ಸದಸ್ಯರನ್ನು ನಾಮನಿರ್ದೇಶನ ಮಾಡುವ ಅಧಿಕಾರದಲ್ಲಿನ ಬದಲಾವಣೆ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

**ಸ್ಟ್ರೋಕ್ ಯೋಜನೆಯ 12.87 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ**

ವೈದ್ಯಕೀಯ ಶಿಕ್ಷಣ ಇಲಾಖೆಯಡಿ ಪಾರ್ಶ್ವವಾಯು ಮತ್ತು ತಲೆಗೆ ತೀವ್ರ ಪೆಟ್ಟಾದ ರೋಗಿಗಳ ಆರೈಕೆಗಾಗಿ ಹಬ್ ಮತ್ತು ಸ್ಪೋಕ್ ಮಾದರಿಯಲ್ಲಿ ಅನುಷ್ಠಾನಗೊಳಿಸುವ ನಿಟ್ಟಿನಲ್ಲಿ ಮೊದಲ ಹಂತದಲ್ಲಿ ಸ್ಪೋಕ್ ಆಗಿ ಕಾರ್ಯನಿರ್ವಹಿಸುವ ಯೋಜನೆಯ 12.87 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಮರುನಾಮಕರಣ**

ಕಂದಾಯ ಇಲಾಖೆಯಡಿ ಹಾವೇರಿ ಜಿಲ್ಲೆ ಹಾನಗಲ್ ತಾಲ್ಲೂಕಿನ ಬಸಾಪೂರ ಗ್ರಾಮದ ಹೆಸರನ್ನು ಗೇರುಗುಟ್ಟ ಬಸಾಪೂರ ಎಂದು ಮರುನಾಮಕರಣ ಮಾಡಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ. ಆನರು ಮೊದಲಿನಿಂದ ಗೇರುಗುಡ್ಡ ಬಸಾಪೂರ ಎಂದು ಕರೆಯುತ್ತಿದ್ದ ಹಿನ್ನೆಲೆಯಲ್ಲಿ ಈ ನಿರ್ಣಯ ಕೈಗೊಳ್ಳಲಾಗಿದೆ ಎಂದು ಸಚಿವ ಹೆಚ್. ಕೆ.ಪಾಟೀಲ್ ತಿಳಿಸಿದರು.

**ಅನುಭವ ಮಂಟಪ ನಿರ್ಮಾಣ: ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆ**

ಬೀದರ್ ಜಿಲ್ಲೆಯ ಬಸವಕಲ್ಯಾಣದಲ್ಲಿ ನಿರ್ಮಾಣಗೊಳ್ಳುತ್ತಿರುವ ನೂತನ ಅನುಭವ ಮಂಟಪ ನಿರ್ಮಾಣ ಕಾಮಗಾರಿಯ 742 ಕೋಟಿಗಳ ಪರಿಷ್ಕೃತ ಅಂದಾಜಿಗೆ ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. 612 ಕೋಟಿ ರೂ.ಗಳ ವೆಚ್ಚವಿತ್ತು. ಒಂದು ವರ್ಷದೊಳಗೆ ಕಾಮಗಾರಿ ಪೂರ್ಣಗೊಳಿಸಲು ಪ್ರಯತ್ನ ಮಾಡಲಾಗುತ್ತಿದೆ ಎಂದು ಸಚಿವರು ತಿಳಿಸಿದರು.

**23.51 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ**

ರಾಜ್ಯ ವಿಪತ್ತು ಉಪಶಪನ ನಿಧಿಯಡಿ ಅನುಮೋದಿಸಿರುವ ರಾಯಚೂರು ಜಿಲ್ಲೆಯ ಲಿಂಗಸಗೂರು ತಾಲ್ಲೂಕಿನ ಶಿಲಹಳ್ಳಿ ಗ್ರಾಮದ ಬಳಿ ಕೃಷ್ಣಾ ನದಿಯ ಉಪನದಿಗೆ ಅಡ್ಡಲಾಗಿ ಹೈಲೆವೆಲ್ ಮೈನರ್ ಸೇತುವೆ ನಿರ್ಮಾಣ ಹಾಗೂ ಹುಬ್ಬಳ್ಳಿ ನಗರದ ರಾಜನಾಲಾಗೆ ತಡೆಗೋಡೆ ನಿರ್ಮಾಣ ಮಾಡುವ ಒಟ್ಟು 23.51 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗಳಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಗ್ರಂಥಾಲಯ ನಿರ್ಮಿಸಲು ರಿಯಾಯಿತಿ ದರದಲ್ಲಿ ನಿವೇಶನ**

ನಗರಾಭಿವೃದ್ಧಿ ಇಲಾಖೆಯಡಿ ರಾಯಚೂರು ಜಿಲ್ಲಾ ಕುರುಬರ ಸಂಘಕ್ಕೆ ಕನಕದಾಸ ಸಾರ್ವಜನಿಕ ಗ್ರಂಥಾಲಯ ನಿರ್ಮಿಸಲು ರಾಯಚೂರು ನಗರದ ಸಿಯತಲಾಬ್ ಬಡಲಾವಣೆಯಲ್ಲಿ ರಾಯಚೂರು ಮಹಾನಗರ ಪಾಲಿಕೆಗೆ ಸೇರಿದ 1200 ಚದರ ಅಡಿ ಅಳತೆಯ ಖಾಲಿ ನಿವೇಶನವನ್ನು ಶೇ 50 ರಷ್ಟು ರಿಯಾಯಿತಿ ದರದಲ್ಲಿ ಮಂಜೂರು ಮಾಡುವ ಬಗ್ಗೆ ಸಚಿವ ಸಂಪುಟ ಒಪ್ಪಿಗೆ ನೀಡಿದೆ.

**ಕನಕನಾಲಾ ಆಧುನೀಕರಣ ಯೋಜನೆಗೆ ಆಡಳಿತಾತ್ಮಕ ಅನುಮೋದನೆ**

ಜಲಸಂಪನ್ಮೂಲ ಇಲಾಖೆಯಡಿ ಕೊಪ್ಪಳ ಜಿಲ್ಲೆ ಕುಷ್ಟಗಿ ತಾಲ್ಲೂಕಿನ ಆರ್ಯಭೋಗಪುರ ಗ್ರಾಮದ ಬಳಿ ಮಸ್ಕಿನಾಲಾದಿಂದ ಕನಕನಾಲಾ ಕಣಿವೆಗೆ ಪ್ರವಾಹದ ನೀರನ್ನು ತಿರುಗಿಸಲು ಮಸ್ಕಿನಾಲೆಯ ಮೇಲ್ಭಾಗದಲ್ಲಿ ಬ್ರಿಡ್ಜ್ ಕಂ ಬ್ಯಾರೇಜ್ ನಿರ್ಮಿಸಲು ಮತ್ತು ಕನಕನಾಲಾ ಆಧುನೀಕರಣ ಯೋಜನೆಯ 134.56 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ. ಹಿನ್ನೀರಿನ ಮೇಲ್ಭಾಗದಲ್ಲಿರುವ ಬಾಧಿತ ಅಚ್ಚುಕಟ್ಟು ಪ್ರದೇಶಗಳಾದ ಆರ್ಯಭೋಗಾಪುರ, ಮುದಲಗುಂಡಿ, ವನರಳ್ಳಿ, ಕಿಲನೂರು, ಕಲ್ಮಳ್ಳಿ, ಅಮರಾಪುರ ತಾಂಡಾಗಳು ಕಿಲ್ಲರಹಟ್ಟಿ ಗ್ರಾಮಗಳಿಗೆ ಅನುಕೂಲ ಕಲಗಪಿಸುವ ಉದ್ದೇಶದಿಂದ ಈ ಯೋಜನೆಯನ್ನು ಕೈಗೊಳ್ಳಲಾಗಿದೆ ಎಂದು ಸಚಿವರು ತಿಳಿಸಿದರು.

**ವಿಯರ್ ನಿರ್ಮಾಣಕ್ಕೆ ಆಡಳಿತಾತ್ಮಕ ಅನುಮೋದನೆ**

ರಾಯಚೂರು ತಾಲ್ಲೂಕಿನ ಸಿಂಧನೂರು ತಾಲ್ಲೂಕಿನ ಚನ್ನಬಸವೇಶ್ವರ (ಒಳಬಳ್ಳಾರಿ) ಏತ ನೀರಾವರಿ ಯೋಜನೆಯ ಜಾಕ್ ವೆಲ್ ಹತ್ತಿರ ತುಂಗಭದ್ರಾ ನದಿಗೆ ಅಡ್ಡಲಾಗಿ ವಿಯರ್ ನಿರ್ಮಾಣ ಮಾಡುವ 43.10 ಕೋಟಿಗಳ ಅಂದಾಜು ಮೊತ್ತದ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆ ನೀಡಲಾಗಿದೆ.

**ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳ ಅನುಷ್ಠಾನಕ್ಕೆ ನಿರ್ಣಯ**

ಆರೋಗ್ಯ ಮತ್ತು ಕುಟಂಬ ಕಲ್ಯಾಣ ಇಲಾಖೆಯಡಿ ರಾಜ್ಯದ ದುರ್ಗಮ ಪ್ರದೇಶದ ಸಂಪರ್ಕ ರಹಿತ ಪ್ರದೇಶಗಳಿಗೆ ಪ್ರಾಥಮಿಕ ಆರೋಗ್ಯ ಆರೈಕೆ ಸೇವೆಗಳನ್ನು 15.97 ಕೋಟಿ ಗಳ ಅಂದಾಜು ವೆಚ್ಚದಲ್ಲಿ ಅನುಷ್ಠಾನ ಮಾಡಲು ಸಚಿವ ಸಂಪುಟ ನಿರ್ಧರಿಸಿದೆ. ಇದು ರಾಜ್ಯದಲ್ಲಿನ ಪ್ರಾಥಮಿಕ ಆರೋಗ್ಯ ಸೇವೆಗಳನ್ನು ನೀಡಲು ಸಂಚಾರಿ ಆರೋಗ್ಯ ಘಟಕಗಳನ್ನು ಎಂಹೆಚ್‌ಯು ಅನುಷ್ಠಾನಕ್ಕೆ ನಿರ್ಣಯ ಮಾಡಿದೆ.

**ವಸತಿ ಯೋಜನೆಗಳಲ್ಲಿ ಅಲ್ಪಸಂಖ್ಯಾತರ ಸಮುದಾಯಕ್ಕೆ ಶೇ 15 ರಷ್ಟು ಮೀಸಲಾತಿ ಹೆಚ್ಚಳ**

ವಸತಿ ಇಲಾಖೆಯಡಿ ರಾಜ್ಯಾದ್ಯಂತ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ವಸತಿ ಇಲಾಖೆ ಅನುಷ್ಠಾನಗೊಳಿಸಲಾಗುವ ವಿವಿಧ ವಸತಿ ಯೋಜನೆಗಳಡಿ ಅಲ್ಪಸಂಖ್ಯಾತ ಸಮುದಾಯದವರಿಗೆ ನಿಗದಿ ಪಡಿಸಿರುವ ಶೇ 10 ರ ಮೀಸಲಾತಿಯನ್ನು 15% ಗೆ ಹೆಚ್ಚಿಸಲು ನಿರ್ಣಯ ಮಾಡಲಾಗಿದೆ. ಕೇಂದ್ರ ಸರ್ಕಾರದವರು ಅಲ್ಪಸಂಖ್ಯಾತರಿಗೆ ಕೊರತೆಯಿದ್ದ ವಸತಿಯನ್ನು ಗಮನಿಸಿ ಸೂಚನೆ ನೀಡಿದೆ. ನಮ್ಮ ಸರ್ಕಾರವು ಈ ಸಮುದಾಯದವರ ವಸತಿರಹಿತರನ್ನು ಹಾಗೂ ಸಾಮಾಜಿಕ ನ್ಯಾಯವನ್ನು ಗಮನದಲ್ಲಿರಿಸಿಕೊಂಡು ಮೀಸಲಾತಿ ಹೆಚ್ಚಿಸಲಾಗಿದೆ.

**ಮಾವು ಬೆಳೆಗಾರರಿಗೆ ಪರಿಹಾರಕ್ಕೆ ಕೇಂದ್ರವನ್ನು ಒತ್ತಾಯಿಸಲು ಕೃಷಿ ಸಚಿವರಿಗೆ ಸೂಚನೆ**

ಮಾವು ಬೆಳೆಗಾರರ ವಿಚಾರವಾಗಿ ಸಚಿವ ಸಂಪುಟ ಸಭೆಯಲ್ಲಿ ಸುದೀರ್ಘ ಚರ್ಚೆಯಾಗಿದೆ. ಕೋಲಾರ, ಬೆಂಗಳೂರು ಗ್ರಾಮೀಣ ಭಾಗದವರು ಚರ್ಚಿಸಿದರು. ರೈತರಿಗೆ ಪರಿಹಾರ ನೀಡಲು ಕೋರಲಾಗಿ, ಮುಖ್ಯಮಂತ್ರಿಗಳು ಕೃಷಿ ಸಚಿವರಿಗೆ ಹಾಗೂ ಮುಖ್ಯ ಕಾರ್ಯದರ್ಶಿಗಳು ಕೇಂದ್ರ ಕೃಷಿ ಸಚಿವರೊಂದಿಗೆ ಚರ್ಚಿಸಲು ಸೂಚನೆ ನೀಡಿದ್ದಾರೆ. ಅಗತ್ಯ ಬಿದ್ದರೆ ಭೇಟಿ ನೀಡಲು ಹಾಗೂ ಸಾಧ್ಯವಾದಷ್ಟು ಹೆಚಿನ ಪರಿಹಾರವನ್ನು ನೀಡಲು ಕೇಂದ್ರವನ್ನು ಒತ್ತಾಯಿಸಬೇಕೆಂದು ಸೂಚನೆ ನೀಡಿದ್ದಾರೆ.ಚಿತ್ತೂರು ಭಾಗದಲ್ಲಿ ರಾಜ್ಯದ ಮಾವಿನ ಹಣ್ಣುಗಳ ಪ್ರವೇಶಕ್ಕೆ ನಿರಾಕರಿಸಿರುವ ಬಗ್ಗೆ ಸಚಿವ ಕೆ.ಹೆಚ್. ಮುನಿಯಪ್ಪ ಪ್ರಸ್ತಾಪ ಮಾಡಿದರು ಎಂದು ತಿಳಿಸಿದರು.

**ಜುಲೈ 17 ಕ್ಕೆ ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ**

ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಜುಲೈ 16–17 ರಂದು ನಿಗದಿಯಾಗಬಹುದು ಎಂದು ಸಚಿವ ಹೆಚ್.ಕೆ.ಪಾಟೀಲ್ ತಿಳಿಸಿದರು. ನಂದಿ ಬೆಟ್ಟದಲ್ಲಿ ಸಚಿವ ಸಂಪುಟ ಸಭೆ ಮುಂದೂಡಲು ಕಾರಣ ಕೇಳಿದ ಸುದ್ದಿಗಾರರ ಪ್ರಶ್ನೆಗೆ ಉತ್ತರಿಸಿ ಸಚಿವರು ಆ ಭಾಗದ ಕೆಲವು ಇಲಾಖೆಗಳಿಂದ ಪ್ರಸ್ತಾವನೆಗಳು ತಲುಪಿರಲಿಲ್ಲ. ಆ ಪ್ರದೇಶಕ್ಕೆ ಪರಿಣಾಮಕಾರಿಯಾಗಿ ಕೆಲಸಗಳು ಆಗಬೇಕು ಎಂಬ ಉದ್ದೇಶದಿಂದ ಮತ್ತು ಕೆಲವು ಸಚಿವರ ಕೋರಿಕೆಯ ಮೇರೆಗೆ ಮುಂದೂಡಲಾಯಿತು ಎಂದರು.

**ಬಿಲ್ಲುಗಳ ಬಗ್ಗೆ ಚರ್ಚೆ**

ಕರ್ನಾಟಕ ಕ್ರೌಡ್ ಕಂಟ್ರೋಲ್ ಮ್ಯಾನೇಜಿಂಗ್ ಕ್ರೌಡ್‌ಅಟ್ ಇವೆಂಟ್ಸ್ ಅಂಡ್ ವೆನ್ಯೂ, ಮಾಸ್ ಗ್ಯಾದರಿಂಗ್ ಬಿಲ್ 2025, ಕರ್ನಾಟಕ ರೋಹಿತ್ ವೇಮುಲಾ ಬಿಲ್ 2025, ಕರ್ನಾಟಕ ಮಿಸ್ ಇನ್ಫರ್ಮೇಷನ್, ಫೇಕ್ ನ್ಯೂಸ್ ಪ್ರಾಹಿಬಿಷನ್ ಬಿಲ್ 2025, ಕರ್ನಾಟಕ ಹೇಟ್ ಸ್ಪೀಚ್ ಅಂಡ್ ಹೇಟ್ ಕ್ರೈಂ ಪ್ರೆವೆನ್ಶನ್ ಬಿಲ 2025 ಬಗ್ಗೆ ಪ್ರಸ್ತಾಪ ಮಾಡಲಾಗಿದ್ದು, ಕೆಲವು ಬಿಲ್ಲುಗಳಲ್ಲಿ ವಿವರವಾದ ಚರ್ಚೆಯಾಗಬೇಕೆಂದು ತೀರ್ಮಾನಿಸಿ ಮುಂದಿನ ಸಚಿವ ಸಂಪುಟಕ್ಕೆ ತರಲು ತೀರ್ಮಾನಿಸಲಾಗಿದೆ ಎಂದರು.

**ಕೆ.ಎ.ಟಿ ವ್ಯವಸ್ಥೆಯ ಬಗ್ಗೆ ಸರ್ಕಾರದ ಚಿಂತನೆ**

ಕೆ.ಎ.ಟಿ ಬಗ್ಗೆ ಸಾಕಷ್ಟು ಚರ್ಚೆ, ಆಕ್ರೋಶ ವ್ಯಕ್ತವಾಗಿದ್ದು, ಇದರ ವ್ಯವಸ್ಥೆ ಬಗ್ಗೆ ರಾಜ್ಯ ಸರ್ಕಾರ ಚಿಂತನೆ ಮಾಡುತ್ತಿದೆ ಎಂದು ಪ್ರಶ್ನೆಗೆ ಉತ್ತರಿಸಿದರು.

# ಜೂ.21 ರಂದು ಅಂತರಾಷ್ಟ್ರೀಯ ಯೋಗ ದಿನಾಚರಣೆ

■ ಹಂಪಿ ಟೈಮ್ಸ್ ಹೊಸಪೇಟೆ

ವಿಜಯನಗರ ಜಿಲ್ಲಾ ಮಟ್ಟದ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆಯನ್ನು ಜೂ.21 ರಂದು ಶನಿವಾರ, ಬೆ.6 ಗಂಟೆಗೆ ನಗರದ ರೈಲ್ವೇ ನಿಲ್ದಾಣ ರಸ್ತೆಯ ಎಸ್.ಕೆ.ಎಂ.ಇ.ಪಿ.ಎಲ್ ಸ್ವಾತಂತ್ರ್ಯ ಉದ್ಯಾನವನ (ಫ್ರೀಡಂ ಪಾರ್ಕ್)ನಲ್ಲಿ ಹಮ್ಮಿಕೊಳ್ಳಲಾಗಿದೆ.

ಕೇಂದ್ರ ಆಯುಷ್ ಮಂತ್ರಾಲಯ, ರಾಷ್ಟ್ರೀಯ ಆಯುಷ್ ಅಭಿಯಾನ, ಜಿಲ್ಲಾಡಳಿತ ಮತ್ತು ಜಿಲ್ಲಾ ಪಂಚಾಯತ್ ಹಾಗೂ ಜಿಲ್ಲಾ ಆಯುಷ್ ಇಲಾಖೆ, ವಿವಿಧ ಯೋಗ ಸಂಸ್ಥೆಗಳ ಸಹಯೋಗದಲ್ಲಿ ನಡೆಯಲಿರುವ 11ನೇ ಅಂತರಾಷ್ಟ್ರೀಯ ಯೋಗ ದಿನಾಚರಣೆ ಕಾರ್ಯಕ್ರಮವನ್ನು ವಸತಿ, ವಕ್ಫ್ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರಾದ ಬಿ.ಝೆಡ್.ಜಮೀರ್ ಅಹ್ಮದ್ ಖಾನ್ ಅವರು ಉದ್ಘಾಟಿಸಲಿದ್ದಾರೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಹಾಗೂ ಆಯುಷ್ ಸೇವೆಗಳ ಸಚಿವರಾದ ದಿನೇಶ್ ಗುಂಡೂರಾವ್ ಅವರ ಘನ ಉಪಸ್ಥಿತಿ ಇರಲಿದೆ. ಹೊಸಪೇಟೆ ಶಾಸಕರಾದ ಹೆಚ್.ಆರ್. ಗವಿಯಪ್ಪನವರು ಅಧ್ಯಕ್ಷತೆ ವಹಿಸಲಿದ್ದಾರೆ. ಮುಖ್ಯ ಅತಿಥಿಗಳಾಗಿ ಬಳ್ಳಾರಿ ಸಂಸದರಾದ ಈ.ತುಕಾರಾಂ, ದಾವಣಗೆರೆ ಸಂಸದರಾದ ಡಾ.ಪ್ರಭಾ ಮಲ್ಲಿಕಾರ್ಜುನ, ಹಗರಿಬೊಮ್ಮನಹಳ್ಳಿ ಶಾಸಕ ಕೆ.ನೇಮಿರಾಜ್ ನಾಯ್ಕ, ಕೂಡ್ಲಿಗಿ ಶಾಸಕ ಡಾ.ಶ್ರೀನಿವಾಸ್.ಎನ್.ಟಿ, ಹೂವಿನಹಡಗಲಿ ಶಾಸಕ ಎಲ್.ಕೃಷ್ಣನಾಯಕ್, ಹರಪನಹಳ್ಳಿ ಶಾಸಕಿ ಎಂ.ಪಿ.ಲತಾ ಮಲ್ಲಿಕಾರ್ಜುನ್, ಜಗಳೂರು ಶಾಸಕ ಬಿ.ದೇವೇಂದ್ರಪ್ಪ, ವಿಧಾನ ಪರಿಷತ್ ಶಾಸಕರಾದ ಚಂದ್ರಶೇಖರ್ ಬಿ. ಪಾಟೀಲ್, ಶಶೀಲ್ ಜಿ. ನಮೋಶಿ, ವೈ.ಎಂ.ಸತೀಶ್, ನಗರಸಭೆ ಅಧ್ಯಕ್ಷ ಎನ್.ರೂಪೇಶ್ ಕುಮಾರ್, ಹುಡಾ ಅಧ್ಯಕ್ಷ ಹೆಚ್. ಎನ್.ಎಫ್.ಇಮಾಮ್ ನಿಯಾಜಿ ಆಗಮಿಸಲಿದ್ದಾರೆ. ಅತಿಥಿಗಳಾಗಿ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ, ವಿಜಯನಗರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಾದ ನವೀನ್‌ರಾಜ್ ಸಿಂಗ್, ಆಯುಷ್ ಇಲಾಖೆ ಆಯುಕ್ತರಾದ ವಿಪಿನ್ ಸಿಂಗ್, ಆಯುಷ್ ಇಲಾಖೆಯ (ಯೋಗ ಮತ್ತು ಪ್ರಕೃತಿ ಚಿಕಿತ್ಸೆ) ಉಪ ನಿರ್ದೇಶಕರಾದ ಡಾ.ಹರೀಶ್‌ಬಾಬು ಹಾಗೂ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್, ಜಿಪಂನ ಸಿಇಒ ನೋಂಗ್ಜಾಯ್ ಮೊಹಮದ್ ಅಲಿ ಅಕ್ರಮ ಷಾ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಶ್ರೀಹರಿಬಾಬು. ಬಿ.ಎಲ್ ಭಾಗವಹಿಸಲಿದ್ದಾರೆ. ಕಾರ್ಯಕ್ರಮಕ್ಕೆ ಶ್ರೀ ಪತಂಜಲಿ ಯೋಗ ಸಂಸ್ಥೆ, ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರಿಯ ವಿದ್ಯಾಲಯ, ಸಮಾಜ ಕಲ್ಯಾಣ ಇಲಾಖೆ, ಸ್ಕೌಟ್ಸ್ & ಗೈಡ್ಸ್, ರಾಷ್ಟ್ರೀಯ ಸೇವಾಯೋಜನೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕರ್ನಾಟಕ ರಾಜ್ಯ ಸರ್ಕಾರಿ ನೌಕರರ ಸಂಘ, ವಿಜಯನಗರ ಘಟಕ, ಟಿ. ಎಂ.ಎ.ಇ. ಆಯುರ್ವೇದಿಕ್ ಕಾಲೇಜ್, ಹೊಸಪೇಟೆ, ಛೇಂಬರ್ ಆಫ್ ಕಾಮರ್ಸ್, ಜೆಸಿಐ ಹೊಸಪೇಟೆ, ರೋಟರಿ ಕ್ಲಬ್, ಎ.ಎಫ್.ಐ, ನೀಮ, ಆರ್ಟ್ ಆಫ್ ಲಿವಿಂಗ್ ಹಾಗೂ ಸಮಸ್ತ ಯೋಗ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಸಹಕಾರ ನೀಡಲಿದ್ದಾರೆ ಎಂದು ಜಿಲ್ಲಾ ಆಯುಷ್ ಅಧಿಕಾರಿಗಳಾದ ಡಾ.ಎಂ.ವಿರೂಪಾಕ್ಷ ತಿಳಿಸಿದ್ದಾರೆ.


**ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.**
ಐ.ಎಸ್.ಆರ್‌ರಸ್ತೆ, ಚಿತ್ತವಾಡ್ಗಿ, ಹೊಸಪೇಟೆ–583201
ದೂರವಾಣಿ ಸಂಖ್ಯೆ:08394–227749
E-mail:hospethuda@gmail.com

ಸಂಖ್ಯೆ:ಹೊನಅಪ್ರಾ/ಎ1/ಭೂಉಬ06/2025–26 ದಿನಾಂಕ:16.06.2025.

**:ಸಾರ್ವಜನಿಕ ಪ್ರಕಟಣೆ:**

**(ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ಕಲಂ 14(ಎ) ರಡಿಯಲ್ಲಿ)**

ಈ ಮೂಲಕ ಸಾರ್ವಜನಿಕರಿಗೆ ತಿಳಿಯಪಡಿಸುವುದೇನೆಂದರೆ, ಹೊಸಪೇಟೆ ತಾ: ಮರಿಯಮ್ಮನಹಳ್ಳಿ ಹೋಬಳಿ ಮರಿಯಮ್ಮನಹಳ್ಳಿ ಗ್ರಾಮದ ಸ.ನಂ.119/3 ರಲ್ಲಿ 2.00 ಎಕರೆ ಹಾಗೂ ಸ.ನಂ.119/ರಲ್ಲಿ 1.26 ಎಕರೆ ಒಟ್ಟು 3.26 ಎಕರೆ ಜಮೀನನ್ನು ಭೂಮಾಲೀಕರಾದ ಶ್ರೀ.ಗುಜ್ಜಲ್ ನಾಗರಾಜ್ ಹೊಸಪೇಟೆ ಇವರು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಲು ಕೋರಿರುತ್ತಾರೆ.

ಪ್ರಸ್ತಾಪಿತ ಜಮೀನು ಹೊಸಪೇಟೆಯ ವಿಸ್ತರಿತ ಸ್ಥಳೀಯ ಯೋಜನಾ ಪ್ರದೇಶದ ವ್ಯಾಪ್ತಿಯಲ್ಲಿ ಕೃಷಿ ವಲಯದಲ್ಲಿ ಬರುತ್ತದೆ. ಕೂಡ್ಲಿಗಿಯಿಂದ ಮರಿಯಮ್ಮನಹಳ್ಳಿಗೆ ಹೋಗುವ ಮುಖ್ಯ ರಸ್ತೆಗೆ ಹೊಂದಿ –ಕೊಂಡಿದ್ದು, ರಸ್ತೆ ಸಂಪರ್ಕ ಇರುತ್ತದೆ. ಪ್ರಸ್ತಾಪಿತ ಜಮೀನನ್ನು ವಸತಿ ಉದ್ದೇಶಕ್ಕೆ ಭೂಉಪಯೋಗ ಬದಲಾವಣೆ ಮಾಡಿ, ಎಲ್ಲಾ ಮೂಲಭೂತ ಸೌಕರ್ಯಗಳನ್ನು ಒದಗಿಸಿ, ಕೈಗೆಟುಕುವ ದರದಲ್ಲಿ ನಿವೇಶನಗಳನ್ನು ಮಾರಾಟ ಮಾಡಲಾಗುವುದು ಎಂದು ಸಾರ್ವಜನಿಕ ಹಿತಾಸಕ್ತಿ ಅರ್ಜಿದಾರರು ತಿಳಿಸಿರುತ್ತಾರೆ.

ಕಾರಣ ಪ್ರಸ್ತಾಪಿತ ಜಮೀನನ್ನು ಕೃಷಿ ವಲಯದಿಂದ ವಸತಿ ಉದ್ದೇಶಕ್ಕೆ ಹೊಸ ಭೂಉಪಯೋಗ ನಿಗಧಿ ಪಡಿಸಲು ಸಾರ್ವಜನಿಕರ ಸಲಹೆ/ ಆಕ್ಷೇಪಣೆಗಳೇನಾದರೂ ಇದ್ದಲ್ಲಿ ಈ ಪ್ರಕಟಣೆಯ ದಿನಾಂಕದಿಂದ 15 ದಿನಗಳೊಳಗಾಗಿ ಆಯುಕ್ತರು ನಗರಾಭಿವೃದ್ಧಿ ಪ್ರಾಧಿಕಾರ ಹೊಸಪೇಟೆ ಇವರಿಗೆ ಲಿಖಿತ ಆಕ್ಷೇಪಣೆ/ಸಲಹೆಗಳನ್ನು ಖುದ್ದಾಗಿ ಅಥವಾ ನೋಂದಾಯಿತ ಅಂಚೆ ಮೂಲಕ ಸಲ್ಲಿಸುವಂತೆ ತಿಳಿಸಲಾಗಿದೆ. ಅವಧಿಯ ನಂತರ ಬಂದ ಆಕ್ಷೇಪಣೆ/ಸಲಹೆಗಳನ್ನು ಪರಿಗಣಿಸಲಾಗುವುದಿಲ್ಲ.

**ಸಹಿ/– ಆಯುಕ್ತರು, ಹೊಸಪೇಟೆ ನಗರಾಭಿವೃದ್ಧಿ ಪ್ರಾಧಿಕಾರ, ಹೊಸಪೇಟೆ.**

ವಾ.ಸಾ.ಸಂ.ಇ/ವಿಜಯನಗರ/2025–26/ಕೆಎಸ್‌ಎಂಸಿಎ/ಆರ್.ಓ.ಸಂಖ್ಯೆ/104

## ನಿತ್ಯ ಪಂಚಾಂಗ

ಮಾಸ: ಜ್ಯೇಷ್ಠ । ಸಂವತ್ಸರ: ವಿಶ್ವವಸು

**20–06–2025 – ಶುಕ್ರವಾರ**

| | |
|---|---|
| ತಿಥಿ | : ನವಮಿ |
| ಪಕ್ಷ | : ಕೃಷ್ಣ |
| ನಕ್ಷತ್ರ | : ರೇವತಿ |
| ಯೋಗ | : ಶೋಭನ |
| ಕರಣ | : ಗರಜ |
| ಸೂರ್ಯೋದಯ | : 05:43:04 |
| ಸೂರ್ಯಾಸ್ತ | : 19:14:06 |
| ರಾಹು ಕಾಲ | : 10:47–12:29 |
| ಯಮಘಂಡ ಕಾಲ | : 15:51–17:33 |
| ಗುಳಿಕ ಕಾಲ | : 07:24–09:06 |

## ತುಂಗಭದ್ರಾ ನೀರಿನ ಮಟ್ಟ



ಗುರುವಾರ : 19–06–2025

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1608.23 ಅಡಿ |
| ಒಳ ಹರಿವು | 43706 ಕ್ಯುಸೆಕ್ |
| ಹೊರ ಹರಿವು | 215 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 34.221 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |

ಕಳೆದ ವರ್ಷ ಇದೇ ದಿನ

| | |
|---|---|
| ಇಂದಿನ ಮಟ್ಟ | 1582.65 ಅಡಿ |
| ಒಳ ಹರಿವು | 749 ಕ್ಯುಸೆಕ್ |
| ಹೊರ ಹರಿವು | 1710 ಕ್ಯುಸೆಕ್ |
| ಸಾಮರ್ಥ್ಯ | 5.887 ಟಿಎಂಸಿ |

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿ, ವಿಜ್ಞಾನ, ವಿಶೇಷ ಲೇಖನಗಳನ್ನು ಓದಲಿಚ್ಛಿಸುವವರು ಈ ಕೆಳಗಿನ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ, ವಾಟ್ಸಪ್ ಗ್ರೂಪಿಗೆ ಜಾಯಿನ್ ಆಗಿ ಹಂಪಿ ಟೈಮ್ಸ್ ಇ-ಪತ್ರಿಕೆ ಓದಿರಿ.
Only Admins can Send Messages to this Group
Join with Us

# ಅಧಿಕಾರಿಗಳ ಗೈರಿಗೆ ಅಸಮಾಧಾನ

## ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ । 7 ಇಲಾಖೆ ಅಧಿಕಾರಿಗಳು ಗೈರು । ಶಾಸಕ ಗರಂ




■ **ಹಂಪಿ ಟೈಮ್ಸ್ ಕೊಟ್ಟೂರು**

ಸ್ಥಳೀಯ ತಾಲೂಕು ಪಂಚಾಯಿತಿಯಲ್ಲಿ ಗುರುವಾರ ನಡೆದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಗೆ 7 ಇಲಾಖೆ ಅಧಿಕಾರಿಗಳು ಗೈರಾಗಿದ್ದಕ್ಕೆ ಅಧ್ಯಕ್ಷೆವಹಿಸಿದ್ದ ಶಾಸಕ ನೇಮಿರಾಜ್ ನಾಯ್ಕ ತೀವ್ರ ಅಸಮಧಾನ ವ್ಯಕ್ತಪಡಿಸಿ ಈ ಕೂಡಲೇ ಈ ಅಧಿಕಾರಿಗಳಿಗೆ ಕಾರಣ ಕೇಳಿ ನೋಟೀಸ್ ನೀಡುವಂತೆ ತಾಪಂ ಇಒ ಡಾ. ಆನಂದ ಕುಮಾರ್‌ಗೆ ಸೂಚನೆ ನೀಡಿದರು.

ಕೃಷಿ ಇಲಾಖೆ ಸಹಾಯಕ ನಿರ್ದೇಶಕ ಕೊಳ್ಳಿ ವಾಮದೇವ, ಖರ್ಚುವೆಚ್ಚ ಕಮ್ಮಿ, ಅಧಿಕ ಲಾಭ'ತಂದು ಕೊಡುವ ಮೆಕ್ಕೆ ಜೋಳಕ್ಕೆ ಬೆನ್ನುತ್ತಿ, ಶೇಂಗಾ, ಸೂರ್ಯಕಾಂತಿ ಬೆಳೆಯಲು ಮುಂದಾಗುತ್ತಿಲ್ಲ ನೀಡಿದ ಅವರು, ನಮ್ಮಲ್ಲಿ ಕಳಪೆ ಬಿತ್ತನೆ ಬೀಜವಿಲ್ಲ. ಪ್ರಮಾಣಿಕೃತ ಬೀಜಕ್ಕಿಂತ ಕಮ್ಮಿ ಬೆಲೆಗೆ ರಾಣಿಬೆನ್ನೂರಿನಿಂದ ಪ್ರಮಾಣಿಕೃತವಲ್ಲದ ಮೆಕ್ಕಜೋಳ ಬೀಜವನ್ನು ತರುತ್ತಿದ್ದಾರೆ ಎಂದು ಸಭೆಗೆ ತಿಳಿಸಿದರು.

ಎಸ್.ಸಿ. ಮತ್ತು ಎಸ್ಟಿ ರೈತರ ಅನುದಾನವನ್ನು ಸರ್ಕಾರದಿಂದ ಬಂದಿಲ್ಲವೆನ್ನುತ್ತಿದ್ದಂತೆ ಶಾಸಕ ನೇಮಿರಾಜ್ ನಾಯ್ಕ, ಈ ಸಮುದಾಯಕ್ಕೆ ಮೀಸಲಾದ ಅನುದಾನವನ್ನು ಅವರ ಅಭಿವೃದ್ಧಿಗೆ ಬಳಸಬೇಕು. ಇತರೆ ಯೋಜನೆಗೆ ಬಳಸುವುದರಿಂದ ಅವರಿಗೆ ಅನ್ಯಾಯ ಮಾಡಿದಂತಾಗುತ್ತದೆ. ಈ ಕುರಿತು ಮಳೆಗಾಲದ ಅಧಿವೇಶನಲ್ಲಿ ಮಾತನಾಡುವೆ ಎಂದರು.

ಗ್ರಾಮೀಣ ಕುಡಿಯುವ ನೀರು ಸರಬರಾಜು ಇಲಾಖೆ ಅಧಿಕಾರಿ ಪ್ರಸನ್ನ, ಜಲಜೀವನ ಯೋಜನೆಯಲ್ಲಿ ತಾಲೂಕಿನಲ್ಲಿ ತಿಮ್ಮಲಾಪುರ, ಲೊಟ್ಟನಕೆರೆಯಲ್ಲಿ ಅನುಷ್ಠಾನಗೊಂಡಿದೆ. ಅನ್ನುತ್ತಿದ್ದಂತೆ ಶಾಸಕ ನೇಮಿರಾಜ್ ನಾಯ್ಕ, ಅಲ್ರೀ, ಊರಗಳಲ್ಲಿ ಸಿಮೆಂಟ್ ರಸ್ತೆಯನ್ನೆಲ್ಲಾ ಕಿತ್ತಾಕಿದ್ದೀರಿ. ಅನ್ನುತ್ತಿದ್ದಂತೆ ಸಭೆಯಲ್ಲಿ ಶುದ್ಧ ಕುಡಿಯುವ ನೀರಿನ ಘಟಕಗಳು ಒಂದೂ ಸರಿ ಇಲ್ಲ ಎಂಬ ದೂರುಗಳು ಕೇಳಿಬಂದವು. ಆಗ ಗುತ್ತಿಗೆದಾರರು ಇನ್ನೂ ನಮ್ಮ ವಶಕ್ಕೆ ನೀಡಿಲ್ಲವೆಂದಾಗ, ಶಾಸಕರು ಗರಂ ಆದ ಘಟನೆಯೂ ನಡೆಯಿತು.

ಲೋಕೋಪಯೋಗಿ ಇಲಾಖೆ ಎಇಇ ನಾಗನಗೌಡ, ತಿಮ್ಮಲಾಪುರದ ಮೊರಾರ್ಜಿ ದೇಸಾಯಿ ವಸತಿ ಶಾಲೆಗೆ ಅಭಿವೃದ್ಧಿಗೆ 54 ಲಕ್ಷ ರೂ. ಮಂಜೂರಾಗಿದೆ ಎನ್ನುತ್ತಿದ್ದಂತೆ ಶಾಸಕ ನೇಮಿರಾಜ್ ನಾಯ್ಕ, ಎಲ್ಲೂ ಕಳೆಪೆಯಾಗದಂತೆ ಎಚ್ಚರಿಕೆ ವಹಿಸಿ ಎಂದ ಅವರು, ನಿಮ್ಮ ಇಲಾಖೆ ಟೆಂಡರ್‌ಗಳು ತುಂಭಾ ವಿಳಂಬವಾಗುತ್ತಿವೆ. ಗುಣಮಟ್ಟದ ಕಾಮಗಾರಿ ಆಗುತ್ತಿಲ್ಲ. ಅಂತಹ ಗುತ್ತಿಗೆದಾರರನ್ನು ಕಪ್ಪುಪಟ್ಟಿಗೆ ಸೇರಿಸಿ ಎಂದು ಸೂಚಿಸಿದರು.

ಶಿಕ್ಷಣ ಇಲಾಖೆ ಕ್ಷೇತ್ರ ಶಿಕ್ಷಣಾಧಿಕಾರಿ ಬಿಇಒ ಜಗದೀಶ, ಕೊಟ್ಟೂರು ಮತ್ತು ಕೂಡ್ಲಿಗಿಯಲ್ಲಿ 141 ಶಿಕ್ಷಕರು, ಪ್ರೈಮರಿಯಲ್ಲಿ 118 ಶಿಕ್ಷಕರ ಕೊರತೆ ಇದೆ ಎಂದಾಗ ಶಾಸಕ ನೇಮಿರಾಜ್ ನಾಯ್ಕ, ಅತಿಥಿ ಶಿಕ್ಷಕರನ್ನು ಆಯ್ಕೆಮಾಡಿಕೊಳ್ಳಿ ಎಂದು ಸೂಚನೆ ನೀಡಿದರು.

ಈ ವೇಳೆ ಹರಾಳು ಗ್ರಾಮದಲ್ಲಿ ಸರ್ಕಾರಿ ಪ್ರೌಢ ಶಾಲೆ ಇಲ್ಲ ಎಂಬ ಪ್ರಶ್ನೆ ಕೇಳಿಬಂದಾಗ, ಕೂಡಲೇ ಸರ್ಕಾರಿ ಪ್ರೌಢ ಶಾಲೆ ಮಂಜೂರಾಗಲು ಕ್ರಮವಹಿಸುವಂತೆ ಸೂಚಿಸಿದರಲ್ಲದೆ, ಖಾಸಗಿ ಶಾಲೆಯವರ ಒತ್ತಡಕ್ಕೆ ಮಣಿಯದೆ ಸರ್ಕಾರಿ ಪ್ರೌಢ ಶಾಲೆ ಮಂಜೂರಾತಿಗೆ ಕ್ರಮವಹಿಸುವಂತೆ ಸೂಚಿಸಿ,

ನನ್ನ ಶಾಸಕತ್ವ ಅವಧಿಯ 2 ವರ್ಷದಲ್ಲಿ ಶಾಲೆಗಳ ಅಭಿವೃದ್ಧಿಗೆ ಮತ್ತು ಶಾಲಾ ಕೊಠಡಿಗಳ ರಿಪೇರಿಗೆ 46 ಕೋಟಿ ರೂ. ಅನುದಾನ ನೀಡಿರುವುದಾಗಿ ತಿಳಿಸಿದರು.

ಪಟ್ಟಣದ ಹಳೆ ಪೊಲೀಸ್ ಠಾಣೆ ಸ್ಥಳದಲ್ಲಿ ಅಂಗನವಾಡಿ ನಿರ್ಮಿಸುವಂತೆ ಅಂಗನವಾಡಿ ಕೇಂದ್ರದ ಅಧಿಕಾರಿ ಮಾಲತಿ ಅವರಿಗೆ ಸೂಚನೆ ನೀಡಿ, ಪೊಲೀಸರ ಹೆಸರಿನಲ್ಲಿರುವ ಖಾತೆಯನ್ನು ಬದಲಾಯಿಸಿ ಅಂಗನವಾಡಿ ಕಟ್ಟಡ ಕಟ್ಟಲು ಪರವಾನಗಿ ಕೊಡಿ ಎಂದು ಪಪಂ ಮುಖ್ಯಾಧಿಕಾರಿ ನಸರುಲ್ಲಾಗೆ ತಿಳಿಸಿದರು.

ತಾಪಂ ನಾಮ ನಿರ್ದೇಶಕರಲ್ಲಿ ಪರಶುರಾಮ್, ಬುಡೇನ್ ಸಾಹೇಬ್, ಗಂಗಾಧರ ಮಾತನಾಡಿದರು ಇವರನ್ನೊರತುಪಡಿಸಿ ಉಳಿದ ಸದಸ್ಯರು ಪ್ರೇಕ್ಷಕರಂತೆ ಸಭೆಯ ಕಲಾಪವನ್ನು ಆಲಿಸಿದರು. ತಾಪಂ ಇಒ ಡಾ. ಆನಂದಕುಮಾರ್, ತಹಶೀಲ್ದಾರ್ ಜಿ.ಕೆ. ಅಮರೇಶ ಇದ್ದರು.

## ಮೈಕ್ರೋ ನ್ಯೂಸ್

### ಜೂ.21 ರಂದು ಜೆಸ್ಕಾಂ ಗ್ರಾಮೀಣ ಗ್ರಾಹಕರ ಸಂವಾದ ಸಭೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೊಸಪೇಟೆ ಗ್ರಾಮೀಣ ಉಪವಿಭಾಗ ಕಚೇರಿಯಲ್ಲಿ ಜೂ.21 ರಂದು ಮಧ್ಯಾಹ್ನ 3 ಗಂಟೆಗೆ ಗ್ರಾಹಕರ ಸಂವಾದ ಸಭೆಯನ್ನು ಏರ್ಪಡಿಸಲಾಗಿದೆ. ಹೊಸಪೇಟೆ ತಾಲೂಕಿನ ಗ್ರಾಮೀಣ ಭಾಗದ ವಿದ್ಯುತ್ ಗ್ರಾಹಕರು(ನಗರ ಹೊರತುಪಡಿಸಿ) ಸಭೆಗೆ ಭಾಗವಹಿಸಿ ವಿದ್ಯುತ್ ಸಮಸ್ಯೆಗಳು ಇದ್ದಲ್ಲಿ ತಮ್ಮ ಅಹವಾಲುಗಳನ್ನು ಸಭೆಯಲ್ಲಿ ಸಲ್ಲಿಸಿ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬಹುದು ಎಂದು ಗ್ರಾಮೀಣ ಉಪ ವಿಭಾಗದ ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು ದಯಾನಂದ ತಿಳಿಸಿದ್ದಾರೆ.

### ತಾಲೂಕು ಕಚೇರಿಗಳಲ್ಲಿ ಡಿಜಿಟಲ್ ಭೂ ದಾಖಲೆಗಳ ವಿತರಣೆ

■ **ಹಂಪಿ ಟೈಮ್ಸ್ ಹೊಸಪೇಟೆ**

ವಿಜಯನಗರ ಜಿಲ್ಲೆಯ ಎಲ್ಲಾ ತಾಲೂಕು ಕಚೇರಿಗಳಲ್ಲಿ ಡಿಜಿಟಲ್ ಭೂ ದಾಖಲೆಗಳ ವಿತರಣೆ ಮೂಲಕ ಸಾರ್ವಜನಿಕರಿಗೆ ದಾಖಲೆಗಳನ್ನು ಒದಗಿಸುವ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗಿದ್ದು, ಜಿಲ್ಲೆಯಲ್ಲಿ ಜೂನ್ 2025 ರಿಂದ ಡಿಜಿಟಲ್ ಭೂ ದಾಖಲೆಗಳನ್ನು ನೀಡಲಾಗುತ್ತಿದೆ. ಎಲ್ಲಾ ಸಾರ್ವಜನಿಕರು ಈ ವ್ಯವಸ್ಥೆಯನ್ನು ಉಪಯೋಗಿಸಿಕೊಳ್ಳುವಂತೆ ಜಿಲ್ಲಾಧಿಕಾರಿ ಎಂ.ಎಸ್.ದಿವಾಕರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಜೂ.21 ಐಟಿಐ ಅಭ್ಯರ್ಥಿಗಳಿಗೆ ಅಪ್ರೆಂಟಿಸ್ ತರಬೇತಿಗೆ ಆಯ್ಕೆ

■ **ಹಂಪಿ ಟೈಮ್ಸ್ ಹೊಸಪೇಟೆ**

ಹೂವಿನಹಡಗಲಿಯ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆಯಲ್ಲಿ ಜೂ.21 ರಂದು ಬೆಂಗಳೂರಿನ ಬುಹ್ಲರ್ ಇಂಡಿಯಾ ಪ್ರೈ.ಲಿ, ಉದ್ಯಮದವರು ಎಂಎಸ್‌ಪಿಟಿ (ಮಲ್ಟಿ ಸ್ಕಿಲ್ಡ್ ಪ್ರೊಡಕ್ಷನ್ ಟೆಕ್ನಿಷಿಯನ್), ಎಂಎಸ್‌ಡಬ್ಲೂ (ಮೆಕಾಟ್ರಾನಿಕ್ ಸ್ಕೂಲ್ ವಿಂಟರ್‌ಥೂರ್) ಸಹಯೋಗದಲ್ಲಿ 1 ಮತ್ತು 2 ವರ್ಷದ ಕಾಲಾವಧಿಗೆ ಅಪ್ರೆಂಟಿಸ್ ತರಬೇತಿ ಆಯ್ಕೆಗೆ ಆಗಮಿಸುತ್ತಿದ್ದಾರೆ. ಐಟಿಐನಲ್ಲಿ 2025 ರಲ್ಲಿ ಪರೀಕ್ಷೆ ಬರೆಯುವ ಫಿಟ್ಟರ್, ವೆಲ್ಡರ್, ಎಲೆಕ್ಟ್ರೀಷಿಯನ್, ಮಶಿನಿಷ್ಟ್ ವೃತ್ತಿಗಳಲ್ಲಿ ಉತ್ತೀರ್ಣರಾದವರು ವಯೋಮಿತಿ 18–20 ವರ್ಷದ ಅಸಕ್ತ ಅಭ್ಯರ್ಥಿಗಳು ಜೂ.21ರಂದು ಹಾಜರಾಗಿ ಪ್ರಯೋಜನಪಡೆದು ಕೊಳ್ಳಬೇಕು ಎಂದು ಸರ್ಕಾರಿ ಕೈಗಾರಿಕಾ ಸಂಸ್ಥೆಯ ಪ್ರಾಚಾರ್ಯರು ತಿಳಿಸಿದ್ದಾರೆ.

